# ಅಧ್ಯಾಪಕ ಪಠ್ಯ
# TEACHER TEXT

# ಕನ್ನಡ
# KANNADA

ತರಗತಿ

I

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

# ಘಟಕ 1

# ನಾವು ನಮ್ಮವರು

## ಪೀಠಿಕೆ

ಈ ಪಾಠಪುಸ್ತಕದ ಒಂದನೆಯ ಪಾಠದಲ್ಲಿ ಸಾಕು ಪ್ರಾಣಿಗಳು ಎಂಬ ಆಶಯವನ್ನು ಆರಿಸಲಾಗಿದೆ. ಸಾಕುಪ್ರಾಣಿಗಳ ಒಡನಾಟವು ಮಗುವಿಗೆ ಬಹಳ ಇಷ್ಟ. ಪ್ರತಿಯೊಂದು ಮಗುವಿನ ಮನೆಯಲ್ಲಿಯೂ ಒಂದಾದರೂ ಸಾಕುಪ್ರಾಣಿ ಇರುವುದು. ಸಾಕುಪ್ರಾಣಿಗಳಿಂದ ನಮಗಿರುವ ಪ್ರಯೋಜನಗಳು ಮತ್ತು ಪರಿಪಾಲನೆಯ ಕುರಿತು ಅರಿವು ಮೂಡಿಸುವುದು ಈ ಪಾಠದ ಉದ್ದೇಶವಾಗಿದೆ. ಈ ಉದ್ದೇಶವನ್ನು ಪೂರೈಸಲು ದನ, ಕೋಳಿ, ನಾಯಿ, ಆಡು ಮುಂತಾದ ಸಾಕುಪ್ರಾಣಿಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ. ಮಕ್ಕಳಿಗೆ ಆಸಕ್ತಿದಾಯಕವಾದ ಚಟುವಟಿಕೆಗಳನ್ನು ಈ ಪಾಠದಲ್ಲಿ ನೀಡಲಾಗಿದೆ.

## ಕಲಿಕಾ ಉದ್ದೇಶ

- ಸರಳವಾದ ಪದಗಳನ್ನು ಮತ್ತು ವಾಕ್ಯಗಳನ್ನು ಆಲಿಸುವುದು, ಅರ್ಥೈಸುವುದು, ಗುರುತಿಸುವುದು, ಹೇಳುವುದು, ಓದುವುದು ಮತ್ತು ಬರೆಯುವುದು
- ಸರಳವಾದ ಪದಗಳನ್ನು ಆಲಿಸುವುದು, ಆಸ್ವಾದಿಸುವುದು ಮತ್ತು ರಾಗವಾಗಿ ಹಾಡಿ ಅಭಿನಯಿಸುವುದು
- ಸರಳವಾದ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗುವುದು.
- ಸಾಕುಪ್ರಾಣಿಗಳನ್ನು ಗುರುತಿಸುವುದು, ನಿರೀಕ್ಷಿಸುವುದು. ಅವುಗಳ ಬಗ್ಗೆ ತಿಳಿದು ಮೌಖಿಕವಾಗಿ ತಿಳಿಯುವುದು.
- ಸಾಕುಪ್ರಾಣಿಗಳನ್ನು ಪರಿಪಾಲಿಸುವ, ಪ್ರೀತಿಸುವ ಮತ್ತು ಸಂರಕ್ಷಿಸುವ ಮನೋಭಾವವನ್ನು ಮೂಡಿಸುವುದು.

ಸಮಯ :45 ಪಿರೀಡುಗಳು

| ಕಲಿಕಾ ಉದ್ದೇಶಗಳು | | | | ಭಾಷಾ ಸತ್ಯಾಂಶಗಳು | ಪರಿಸರ ನಿರೀಕ್ಷಣೆ | ಭಾಷಾ ವ್ಯವಹಾರ ರೂಪಗಳು | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|---|
| ಪಾಠದ ಹೆಸರು | ಆಶಯ / ತಿಳುವಳಿಕೆಗಳು | ಭಾಷಾ ಸಾಮರ್ಥ್ಯಗಳು / ನೈಪುಣ್ಯಗಳು | ಮೌಲ್ಯಗಳು/ ಮನೋಭಾವಗಳು. | | | | | |
| 1. ನಾವು ನಮ್ಮವರು | ● ಸಾಕುಪ್ರಾಣಿಗಳ ಕುರಿತು ತಿಳಿಯುವುದು. | ● ಆಲಿಸುವುದು<br>● ಓದುವುದು<br>● ಬರವಣಿಗೆ<br>● ರಾಗಬದ್ಧವಾಗಿ ಹಾಡುವುದು<br>● ಆಶಯಗಳನ್ನು ಸ್ವಂತ ವಾಕ್ಯದಲ್ಲಿ ಬಳಸುವುದು | ● ಸಾಕುಪ್ರಾಣಿಗಳ ಬಗ್ಗೆ ಒಲವು ಮೂಡಿಸುವುದು<br>● ಸಾಕುಪ್ರಾಣಿಗಳನ್ನು ಪರಿಪಾಲಿಸುವುದು, ಪ್ರೀತಿಸುವುದು, ಸಂರಕ್ಷಿಸುವು | ● ಲ, ವ, ದ, ನ, ಮ, ರ, ಆ ಇತ್ಯಾದಿ ಅಕ್ಷರಗಳನ್ನು | ● ಹೋಲಿಸುವುದು<br>● ಗುರುತಿಸುವುದು | ● ಕತೆ<br>● ಪದ್ಯ<br>● ಆಭಿನಯ ಗೀತೆ<br>● ಚಿತ್ರ ಓದು | ● ಚಿತ್ರ ಓದು<br>● ಚಿತ್ರದ ಬಗ್ಗೆ ಹೇಳುವುದು<br>● ಓದುವುದು<br>● ಹಾಡುವುದು<br>● ಚಿಬಣ್ಣ ಹಚ್ಚುವುದು<br>● ಗುರುತಿಸುವುದು, ಜೊತೆಗೊಳಿಸುವುದು<br>● ಬರವಣಿಗೆ<br>● ಅಕ್ಷರಗಳಿಂದ ಪದ ರಚನೆ<br>● ದಾರಿ ತೋರಿಸುವುದು<br>● ನಿರ್ಮಾಣ<br>● ಮಾದರಿಯಂತೆ ಬರೆಯುವುದು | ● ಮಕ್ಕಳ ರಚನೆಗಳು<br>● ಓದುವಿಕೆ<br>● ಆಲಾಪನೆ<br>● ಮಾತುಗಾರಿಕೆ |

## ಯೂನಿಟ್ ವಿಶ್ಲೇಷಣೆ

ಲವ, ಅವನ ಮನೆಯ ಸದಸ್ಯರು, ಗೆಳೆಯರು ಮತ್ತು ಸಾಕುಪ್ರಾಣಿಗಳ ಕುರಿತಾದ ಆಖ್ಯಾನದ ಮೂಲಕ ನಾವು ನಮ್ಮವರು ಎಂಬ ಪಾಠಭಾಗದ ಆಶಯಗಳನ್ನು ಪರಿಚಯಿಸಲಾಗಿದೆ. ಈ ಪಾಠಭಾಗದಲ್ಲಿ ಮಕ್ಕಳಿಗೆ ಆಸಕ್ತಿದಾಯಕವಾದ ಚಿತ್ರ ರಚನೆ, ಕಥೆ, ಪದ್ಯ, ಅಭಿನಯ ಗೀತೆ, ಓದುವಿಕೆ, ಬರವಣಿಗೆ, ನಿರ್ಮಾಣ ಮುಂತಾದ ಚಟುವಟಿಕೆಗಳನ್ನು ನೀಡಲಾಗಿದೆ. ಈ ಪಾಠದಲ್ಲಿ ಲ,ವ,ಮ,ರ,ದ,ಆ,ನ ಎಂಬೀ ಅಕ್ಷರಗಳಿಗೆ ಒತ್ತು ನೀಡಲಾಗಿದೆ. ಈ ಅಕ್ಷರಗಳನ್ನು ಪರಿಚಯಿಸಲು ಸೂಕ್ತವಾದ ಚಟುವಟಿಕೆಗಳನ್ನು ಪಾಠಪುಸ್ತಕದಲ್ಲಿಯೂ ಚಟುವಟಿಕಾ ಪುಸ್ತಕದಲ್ಲಿಯೂ ನೀಡಲಾಗಿದೆ. ಪರಿಸರ ಅಧ್ಯಯನಕ್ಕೆ ಸಂಬಂಧಿಸಿ ನಿರೀಕ್ಷಣೆಗೆ ಮತ್ತು ಹೋಲಿಸುವ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ. ಗಣಿತ ವಿಷಯಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಸಾಧ್ಯತೆಗಳನ್ನು ಅಧ್ಯಾಪಕರು ಕಂಡುಕೊಳ್ಳಬಹುದು. ಮಕ್ಕಳ ಶಾರೀರಿಕ ಚಲನೆಗಳಿಗೆ ಪೂರಕವಾದ ಮತ್ತು ಆತ್ಮವಿಶ್ವಾಸ ಹೆಚ್ಚಿಸುವ ಚಟುವಟಿಕೆಗಳನ್ನು ಈ ಪಾಠಭಾಗದಲ್ಲಿ ಒಳಪಡಿಸಲಾಗಿದೆ.

ಬಹುಭಾಷಾ ಹಿನ್ನಲೆಯಿಂದ ಬರುವ ಮಕ್ಕಳಿಗಾಗಿ ಸರಳ ಚಟುವಟಿಕೆಗಳನ್ನು ನೀಡಲಾಗಿದೆ.

## ಪಾಠಪುಸ್ತಕದ ಕಡೆಗೆ

**ಆಖ್ಯಾನ :**

ಲವನು ಬೆಳಗ್ಗೆ ಎದ್ದು ಅಮ್ಮಾ... ಅಮ್ಮಾ... ಎಂದು ಕರೆಯುತ್ತಾ ಅಡುಗೆ ಕೋಣೆಗೆ ಹೋದನು. ಅಲ್ಲಿ ಅಮ್ಮನನ್ನು ಕಾಣಲಿಲ್ಲ. ಅಂಗಳಕ್ಕೆ ಇಳಿದನು. ಅಲ್ಲಿಯೂ ಯಾರೂ ಇಲ್ಲ. ಹಿತ್ತಿಲಿನ ಹಟ್ಟಿಯಲ್ಲಿ ಮಾತನಾಡುವುದು ಕೇಳಿಸಿತು. ಲವನು ಹಟ್ಟಿಯ ಬಳಿಗೆ ಓಡಿದನು. ಅಪ್ಪ, ಅಮ್ಮ, ತಂಗಿ ನಯನ ಎಲ್ಲರೂ ಹಟ್ಟಿಯ ಬಳಿ ನಿಂತಿದ್ದರು. ಅಪ್ಪ ಏನಾಯಿತು ಲವ ಕೇಳಿದನು. ಹಟ್ಟಿಯಲ್ಲಿ ಪುಟ್ಟ ಕರುವೊಂದು ಓಡಾಡುತ್ತಿತ್ತು. ಲವ, ಕಪಿಲೆ ಕರು ಹಾಕಿತು. ಅಮ್ಮ ಖುಷಿಯಿಂದ ಹೇಳಿದರು. ಆಟ ಆಡಲು ಇನ್ನೊಬ್ಬ ಗೆಳೆಯ ಸಿಕ್ಕಿದನೆಂದು ಲವನಿಗೆ ಸಂತೋಷವೇ ಸಂತೋಷ. ಕರು ಕಪಿಲೆಯ ಬಳಿಗೆ ಬಂದು ಬಾಲವಾಡಿಸುತ್ತಾ ಹಾಲು ಕುಡಿಯತೊಡಗಿತು. ನಯನ ಮೆಲ್ಲನೆ ಅದನ್ನು ಮುಟ್ಟಿ ನೋಡಿದಳು. ಆಹಾ ಎಷ್ಟು ಮೃದುವಾದ ಮೈ.

(ಪುಟಾಣಿ ಕರುವೊಂದು ನಮ್ಮನೇಲಿದೆ ಪದ್ಯವನ್ನು ಮಕ್ಕಳಿಗೆ ಆಲಿಸಲು ಸಂದರ್ಭವನ್ನು ಒದಗಿಸುವುದು)QR CODE

**ಆಖ್ಯಾನ:**

ಆಡುತ್ತಾ ಹಾಡುತ್ತಾ ಇದ್ದರೆ ಶಾಲೆಗೆ ಹೋಗಲು ತಡವಾಗಬಹುದು.ಬೇಗನೆ ಶಾಲೆಗೆ ಹೊರಡಿ ಮಕ್ಕಳೇ. ಸಂಜೆ ಬಂದು ಕರುವಿನೊಡನೆ ಆಟವಾಡಬಹುದು. ಅಮ್ಮ ಹೇಳಿದರು. ಲವನು ಮನಸ್ಸಿಲ್ಲದ ಮನಸ್ಸಿನಿಂದ ಶಾಲೆಗೆ ಹೊರಟನು. ಮತ್ತೊಮ್ಮೆ ದನ ಮತ್ತು ಕರುವನ್ನು ನೋಡಲು ಬಂದನು. ನಿಮಗೂ ನೋಡಬೇಡವೆ?

ಪಾಠಪುಸ್ತಕದ ಪುಟ ಸಂಖ್ಯೆ 7ರ ಚಿತ್ರ ಓದು.

ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು.

ಚಿತ್ರದಲ್ಲಿ ಏನೆಲ್ಲಾ ಇದೆ?

ಚಿತ್ರದಲ್ಲಿ ಯಾರೆಲ್ಲಾ ಇದ್ದಾರೆ?(ದನ,ಕರು,ಅಮ್ಮ ,ಅಪ್ಪ,ಲವ,ನಯನ ಹೇಳಿದ ಪದಗಳನ್ನು ಕರಹಲಗೆಯನ್ನು ಬರೆಯುವುದು)

ಅಮ್ಮ ಏನು ಮಾಡುತ್ತಿದ್ದಾರೆ?

ಅಪ್ಪ ಏನು ಮಾಡುತ್ತಿದ್ದಾರೆ?

ನಿಮಗೆ ಚಿತ್ರ ಇಷ್ಟವಾಯಿತೆ?

ಇದು ಯಾರ ದನ ?

ನಿರೀಕ್ಷಿತ ಉತ್ತರವಾದ ಲವನ ದನ ಎಂಬುದನ್ನು ಗಟ್ಟಿಯಾಗಿ ಹೇಳುತ್ತಾ ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ಗಟ್ಟಿಯಾಗಿ ಹೇಳುವುದು.

ಲವನ ದನ ನೋಡಲು ಹೇಗಿದೆ?

ಮಕ್ಕಳು ಹೇಳಿದ ಉತ್ತರಗಳನ್ನು ಕ್ರೋಢೀಕರಿಸಿ ಅಂದದ ದನ ಎಂದು ಗಟ್ಟಿಯಾಗಿ ಹೇಳುತ್ತಾ ಕರಿಹಲಗೆಯಲ್ಲಿ ಬರೆಯುವುದು. ಎಲ್ಲಾ ಮಕ್ಕಳೂ ಗಟ್ಟಿಯಾಗಿ ಹೇಳುವುದು.

ಬಳಿಕ ಪಾಠಪುಸ್ತಕದ ಪುಟಸಂಖ್ಯೆ 8ರ ಪರಿಚಯ

ಓದುವಿಕೆಯ ಪ್ರಕ್ರಿಯೆಗಳನ್ನು ಪಾಲಿಸುತ್ತಾ ಮಕ್ಕಳಿಂದ ಓದಿಸುವುದು.

ದನಕ್ಕೆ ಬಣ್ಣ ಹಚ್ಚುವ ಚಟುವಟಿಕೆಯನ್ನು ನೀಡುವುದು. ಇದರ ಮುಂದುವರಿಕೆಯಾಗಿ ಚಟುವಟಿಕಾ ಪುಸ್ತಕದ 1.5 ಚಟುವಟಿಕೆಯನ್ನು ನೀಡುವುದು. ಬಳಿಕ ಚಟುವಟಿಕಾ ಪುಸ್ತಕದ 1.11ಚಟುವಟಿಕೆಯನ್ನು ನೀಡುವುದು. 1.11ರಲ್ಲಿ ಕೊಟ್ಟಿರುವ ಗೆರೆ ಎಳೆಯಿರಿ ಚಿತ್ರದ ಬಲಭಾಗದ ಸಣ್ಣ ಚುಕ್ಕಿ ಚಿತ್ರವನ್ನು ಟೀಚರು ಕರಿಹಲಗೆಯಲ್ಲಿ ಬಿಡಿಸಿ ಪ್ರತಿಯೊಂದು ಚುಕ್ಕಿಯನ್ನು ಪರಸ್ಪರ ಜೋಡಿಸುವುದು. ಅದರ ಕೆಳಗೆ ನೀಡಿರುವ ಚುಕ್ಕಿಗಳ ಚಿತ್ರವನ್ನು ಮಕ್ಕಳು ಸ್ವತಂತ್ರವಾಗಿ ಜೋಡಿಸುವುದು. ಬಳಿಕ ಗೆರೆಎಳೆದು ಜೋಡಿಸುವ ಚಟುವಟಿಕೆಯನ್ನು ಮಕ್ಕಳು ಸ್ವತಂತ್ರವಾಗಿ ಮಾಡುವುದು. ಅಗತ್ಯವಿರುವ ಮಕ್ಕಳಿಗೆ ಟೀಚರು ಸೂಚನೆಗಳನ್ನು/ಸಹಾಯವನ್ನು ನೀಡುವುದು. ಇದರ ಮುಂದುವರಿಕೆಯಾಗಿ ಚಟುವಟಿಕಾ ಪುಸ್ತಕದ 1.9ಚಟುವಟಿಕೆಯನ್ನು ನೀಡುವುದು.(ಕ್ರಯೋನ್ಸ್ ಗಳನ್ನು ಉಪಯೋಗಿಸಬೇಕು) ಬಳಿಕ ಪಾಠಪುಸ್ತಕದ ಚುಕ್ಕೆ ಜೋಡಿಸಿ ಬರೆಯಿರಿ(ಪುಟ ಸಂಖ್ಯೆ 9) ಚಟುವಟಿಕೆ ನೀಡುವುದು.

**ಆಖ್ಯಾನ:**

ಲವ ಮತ್ತು ನಯನ ಬೇಗ ಬೇಗನೆ ಶಾಲೆಯ ಕಡೆಗೆ ನಡೆದರು. ದಾರಿಯಲ್ಲಿ ಗೆಳೆಯನಾದ ವರದನು ಅವರನ್ನು ಕಾಯುತ್ತಿದ್ದನು. ಎಲ್ಲರೂ ನಡೆದು ಶಾಲೆಯ ಬಳಿ ತಲುಪಿದರು. ಗೇಟಿನ ಸಮೀಪ ತಲುಪಿದಾಗ ಕಸದ ತೊಟ್ಟಿಯಿಂದ ಒಂದು ಕೂಗು ಕೇಳಿಸಿತು. ಮಕ್ಕಳು ತೊಟ್ಟಿಯೊಳಗೆ ಬಗ್ಗಿ ನೋಡಿದರು. ಕುಯಿಂ ಕುಯಿಂ ಅಳುವುದನ್ನು ಕಂಡರು.

ಅಳುತ್ತಿರುವುದು ಯಾರು? (ಸ್ವತಂತ್ರ ಪ್ರತಿಕ್ರಿಯೆ) ಹೌದು. ಅದೊಂದು ನಾಯಿಮರಿ. ವರದನು ಕಸದ ಒಳಗೆ ಬದ್ದಿರುವ ನಾಯಿಮರಿಯನ್ನು ಎತ್ತಿಕೊಂಡನು. ಅದರ ಮೈಗೆ ಅಂಟಿದ್ದ ಕಸವನ್ನೆಲ್ಲ ತೆಗೆದನು. ಕುಯಿಂ ಕುಯಿಂ ನಾಯಿಮರಿ ಅಳತೊಡಗಿತು. ಅದಕ್ಕೆ ಹಸಿವೆ ಆಗುತ್ತಿರಬಹುದು. ಎನ್ನುತ್ತಾ ನಯನ ತಾನು ತಿನ್ನಲು ತಂದ ದೋಸೆಯನ್ನು ನಾಯಿಮರಿಗೆ ಕೊಟ್ಟಳು. ಅದು ಗಬಗಬನೆ ತಿಂದು ಸಂತೋಷದಿಂದ ಬಾಲ ಅಲ್ಲಾಡಿಸಿತು. ಮಕ್ಕಳಿಗೆ ಸಂತೋಷವಾಯಿತು.

ನಾಯಿಮರಿ ಪದ್ಯ ಹಾಡುವುದು.(ಪುಟ ಸಂಖ್ಯೆ 9)

ಶಾಲೆಯ ಘಂಟೆ ಬಡಿಯಿತು. ಮಕ್ಕಳು ತರಗತಿಯೊಳಗೆ ಹೋದರು. ಟೀಚರು ತರಗತಿಗೆ ಬಂದರು. ಟೀಚರ ಕೈಯಲ್ಲಿ ಹಲವು ಜೀವಿಗಳ ಮುಖವಾಡಗಳಿದ್ದವು. ಮಕ್ಕಳಿಗೆಲ್ಲ ಬಹಳ ಕುತೂಹಲ. ಈಗ ನಾವೊಂದು ಹಾಡು ಹಾಡೋಣ ಟೀಚರು ಹೇಳಿದರು. ಮಕ್ಕಳಿಗೆಲ್ಲಾ ಸಂತೋಷವೇ ಸಂತೋಷ. ಟೀಚರು ಹಾಡಿದಂತೆ ಮಕ್ಕಳೂ ಹಾಡಿದರು.

**ಆಖ್ಯಾನ:**

ಇನ್ನು ಮುಖವಾಡಗಳನ್ನು ಧರಿಸೋಣವೇ? ಟೀಚರ್ ಕೇಳಿದೊಡನೆ ಎಲ್ಲರೂ ಒಂದೊಂದು ಮುಖವಾಡವನ್ನು ತೆಗೆದುಕೊಂಡರು. ವರದ ಇಲ್ಲಿ ನೋಡು. ನನಗೆ ದನದ ಮುಖವಾಡ ಸಿಕ್ಕಿತು. ಲವ ಖುಷಿಯಿಂದ ಹೇಳಿದನು. ನನಗೆ ನಾಯಿಮರಿ ಸಿಕ್ಕಿತು. ವರದನು ಹೇಳಿದನು. ನಿಮಗೆ ಸಿಕ್ಕಿದ ಮುಖವಾಡಗಳನ್ನು ಧರಿಸಿ ಆ ಜೀವಿಗಳು ಕೂಗುವಂತೆ ಕೂಗಬೇಕು ಟೀಚರು ಹೇಳಿದರು. ತರಗತಿಯೊಳಗೆ ಜೀವಿಗಳ ಗದ್ದಲವೇ ಗದ್ದಲ.

ಹಾಡೋಣ ನಲಿಯೋಣ(ಚಟುವಟಿಕಾ ಪುಸ್ತಕದ 1.4)

ಪದ್ಯವನ್ನು ಟೀಚರು ಹಾಡುವುದು. ಮಕ್ಕಳೂ ಹಾಡುವುದು. (2,3 ಸಲ) ಈ ಚಟುವಟಿಕೆ ನಡೆಸಲು ಟೀಚರು ಮಕ್ಕಳ ಸಂಖ್ಯೆಗನುಸರಿಸಿ ನಾಯಿ,ಬೆಕ್ಕು,ದನ,ಬಾತುಕೋಳಿ,ಕೋಳಿಗಳ ಮುಖವಾಡಗಳನ್ನು ಮೊದಲೇ ತಯಾರಿಸಿ ತರಗತಿಗೆ ತರಬೇಕು. ಹಾಡು ಹಾಡಿದ ಬಳಿಕ ಮಕ್ಕಳು ಮುಖವಾಡಗಳನ್ನು ಧರಿಸಿದವರು ಗುಂಪಾಗಿ ಶಬ್ದವನ್ನು ಅನುಕರಿಸುವುದು. ಬಳಿಕ ಪದ್ಯವನ್ನು ಪುನಃ ಹಾಡುವುದು(ಲಾಲಲಾಲ)

**ಆಖ್ಯಾನ:**

ಹಾಡುತ್ತಾ ಆಡುತ್ತಾ ಸಂಜೆಯಾದುದೇ ತಿಳಿಯಲಿಲ್ಲ. ಶಾಲೆ ಬಿಟ್ಟಿತು.ವರದ, ಲವ ಮತ್ತು ನಯನ ಮನೆಗೆ ನಡೆದರು. ವರದನ ಮನೆಯ ಬಳಿ ತಲುಪಿದರು.ಅವನ ಅಂಗಳದ ಬದಿಯಲ್ಲಿ ಒಂದು ದೊಡ್ಡ ಆಲದ ಮರ. ಮಕ್ಕಳು ಯಾವಾಗಲೂ ಅದರ ಅಡಿಯಲ್ಲಿ ಸ್ವಲ್ಪ ಹೊತ್ತು ಆಟ ಆಡಿಯೇ ಮನೆಗೆ ಹೋಗುವುದು. ಮರದ ಬೀಳಲುಗಳಲ್ಲಿ ಉಯ್ಯಾಲೆಯಾಡುತ್ತಿದ್ದರು. ಆಹಾ! ಎಷ್ಟು ಚಂದದ ಮರ.

ಓದುವ(ಪುಟ ಸಂಖ್ಯೆ11) ಚಟುವಟಿಕೆಯನ್ನು ನಡೆಸುವುದು.

ಚಿತ್ರ ಓದು

ಚಿತ್ರದಲ್ಲಿ ಏನೆಲ್ಲಾ ಕಾಣುತ್ತಿದೆ?(ಮಕ್ಕಳು ಬಾಯ್ದೆರೆಯಾಗಿ ಹೇಳವುದು)

ಚಿತ್ರದಲ್ಲಿರುವ ಹುಡುಗ ಯಾರು?

ಚಿತ್ರದಲ್ಲಿ ಕಾಣುವುದು ಯಾರ ಮನೆ?

ಚಿತ್ರದಲ್ಲಿರುವ ಮರ ಯಾವುದು?

ಮಕ್ಕಳು ಹೇಳಿದ ಉತ್ತರಗಳನ್ನು ಟೀಚರು ಗಟ್ಟಿಯಾಗಿ ಹೇಳುತ್ತಾ ಕರಿಹಲಗೆಯಲ್ಲಿ ಬರೆಯುವುದು. ವರದ, ಮರ, ಆಲ ಎಂಬೀ ಪದಗಳಿಗೆ ಒತ್ತು ನೀಡುವುದು. ಈ ಪದಗಳನ್ನು ಆವರ್ತಿಸಿ ಓದಿದ ನಂತರ ಪಾಠಪುಸ್ತಕದ ಓದುವ ಚಟುವಟಿಕೆಯ ಪರಿಚಯ. ಪ್ರತಿಯೊಂದು ಮಗುವೂ ಸ್ವತಂತ್ರವಾಗಿ ಓದುವಂತೆ ಮಾಡುವುದು. ಬಳಿಕ ಕೆಳಗೆ ಕೊಟ್ಟಿರುವ ಮರ, ವರದ, ಆಲ, ಲವ ಎಂಬೀ ಪದಗಳನ್ನು ಮಕ್ಕಳು ಗಟ್ಟಿಯಾಗಿ ಓದುವುದು.

ಬಳಿಕ (ಪುಟ ಸಂಖ್ಯೆ 12ರ) ಚಿತ್ರ ಪರಿಚಯ

ಕೊಟ್ಟಿರುವ ಪದಗಳನ್ನು ಎಲ್ಲಾ ಮಕ್ಕಳು ಸ್ವತಂತ್ರವಾಗಿ ಓದುವುದು. (ಆಲದ ಮರ) ಬಳಿಕ ಟೀಚರ ಸೂಚನೆಯಂತೆ ಸೂಕ್ತ ಬಣ್ಣಗಳಿಂದ ಚಿತ್ರಕ್ಕೆ ಬಣ್ಣ ಹಚ್ಚುವುದು. (ಬಣ್ಣಗಳನ್ನು ಟೀಚರು ಒದಗಿಸುವುದು)

ಬಳಿಕ ಟೀಚರು ಪುಟ ಸಂಖ್ಯೆ 13ರ ಓದುವ ಚಟುವಟಿಕೆಯನ್ನು ನಡೆಸುವುದು ಈಗಾಗಲೇ ಈ ಎಲ್ಲಾ ಪದಗಳ ಅಕ್ಷರಗಳ ಪರಿಚಯವಾಗಿರುವುದರಿಂದ ಈ ಚಟುವಟಿಕೆಯನ್ನು ಮಕ್ಕಳು ಸ್ವತಂತ್ರವಾಗಿ ಮಾಡಬೇಕು. ಅಗತ್ಯವಿರುವ ಮಕ್ಕಳಿಗೆ ಟೀಚರು ಸಹಾಯ ನೀಡುವುದು. ಓದಿದ ಬಳಿಕ ಕೆಳಗೆ ಕೊಟ್ಟಿರುವ ಚಿತ್ರಗಳನ್ನು ನೋಡಿ ಚಿತ್ರಗಳ ಕೆಳಗೆ ಸೂಕ್ತವಾದ ಪದಗಳನ್ನು ಮಕ್ಕಳು ಬರೆಯುವುದು. ಬರವಣಿಗೆಗೆ ಸಹಾಯಕವಾಗಲು ಟೀಚರು ಕರಿಹಲಗೆಯಲ್ಲಿ ಆ ಪದಗಳನ್ನು ದೊಡ್ಡದಾಗಿ ಬರೆದು ತೋರಿಸಬೇಕು. ಆಲದ ಮರದ ಚಿತ್ರದ ಕೆಳಗೆ ಮರ ಎಂದು ಬರೆದರೆ ಸಾಕು. ಈ ಚಟುವಟಿಕೆ ಪೂರ್ತಿಯಾದಾಗ ತರಗತಿಯ ಎಲ್ಲಾ ಮಕ್ಕಳಿಗೂ ದನ,ಮರ,ಮನೆ ಎಂಬೀ ಪದಗಳನ್ನು ಓದಲು ಮತ್ತು ಬರೆಯಲು ಸಾಧ್ಯವಾಗುವುದು. ಇದರ ಮುಂದುವರಿಕೆಯಾಗಿ ಚಟುವಟಿಕಾ ಪುಸ್ತಕದ ಪೂರ್ತಿಗೊಳಿಸಿರಿ (1.5) ಚಟುವಟಿಕೆಯನ್ನು ನಡೆಸುವುದು.

**ಆಖ್ಯಾನ:**

ಸಂಜೆಯಾದಾಗ ಕೆಲವು ಜೀವಿಗಳು ಆಟವಾಡಲು ಮರದ ಬಳಿ ಬಂದುವು. ಯಾವುದೆಲ್ಲಾ ಬಂದಿರಬಹುದು?

ಸ್ವಂತ ಪ್ರತಿಕ್ರಿಯೆ

ಆಮೆ,ದನ,ಕೋಳಿ,ಆಡು,ಬಾತುಕೋಳಿ,ಮೊಲ ಮುಂತಾದವುಗಳು.

ಮಕ್ಕಳನ್ನು ಕಂಡು ಆಮೆ ಹೆದರಿ ಚಿಪ್ಪಿನೊಳಗೆ ಅಡಗಿತು. ಹಾವು ಹುತ್ತದ ಒಳಗೆ ಹೋಯಿತು. ಸಾಕುಪ್ರಾಣಿಗಳೆಲ್ಲಾ ಮಕ್ಕಳ ಜೊತೆ ಆಟ ಆಡಿ ಅವರೊಂದಿಗೆ ಮನೆಗೆ ಹೋದರು. ಮನೆಗೆ ಹೋದವರು ಯಾರೆಲ್ಲಾ?

T.B 14ರ ಚಟುವಟಿಕೆಯನ್ನು ನಡೆಸುವುದು.

ಮುಂದುವರಿಕೆಯಾಗಿ ಚಟುವಟಿಕಾ ಪುಸ್ತಕದ ಮನೆಗೆ ಸೇರಿಸುವ (1.6) ಮತ್ತು ಇಲಿಗೆ ದಾರಿ ತೋರಿಸಿರಿ(1.7) ಚಟುವಟಿಕೆಗಳನ್ನು ಸೂಕ್ತವಾದ ಸೂಚನೆಗಳನ್ನು ನೀಡಿ ನಡೆಸುವುದು.

ಮನೆಗೆ ಸೇರಿಸಿದ ಜೀವಿಗಳು ಯಾವುವೆಲ್ಲಾ?ಸ್ವಂತ ಪ್ರತಿಕ್ರಿಯೆ

ಇವುಗಳೆಲ್ಲಾ ಸಾಕುಪ್ರಾಣಿಗಳು ಅಲ್ಲವೇ?

ನಾವು ಅವುಗಳನ್ನು ಸಾಕುವುದು ಯಾಕೆ? ಸ್ವಂತ ಪ್ರತಿಕ್ರಿಯೆ

ದನ ನಮಗೆ ಏನು ಕೊಡುತ್ತದೆ?ಸ್ವಂತ ಪ್ರತಿಕ್ರಿಯೆ

ನಾಯಿ ಬೆಕ್ಕುಗಳನ್ನು ಸಾಕುವುದು ಯಾಕೆ?

ಇದೇ ರೀತಿ ಕೋಳಿ, ಬಾತುಕೋಳಿ, ಆಡು ಇವುಗಳಿಂದ ನಮಗೆ ಏನೆಲ್ಲಾ ಸಿಗುತ್ತದೆ? ಸ್ವಂತ ಪ್ರತಿಕ್ರಿಯೆಗಳ ನಂತರ ಪಾಠಪುಸ್ತಕದ ಪುಟಸಂಖ್ಯೆ15ರ ಇವು ಯಾಕೆ ಬೇಕು? ಚಟುವಟಿಕೆಯನ್ನು ಸೂಕ್ತವಾದ ಸೂಚನೆಗಳಿಂದ ನಡೆಸುವುದು. ಆಡಿನಿಂದ ಸಿಗುವ ಪ್ರಯೋಜನಗಳನ್ನು ತಿಳಿದು, ಕೋಳಿಯಿಂದ ಸಿಗುವ ಪ್ರಯೋಜನಗಳನ್ನು ಬರೆಯುವುದು. ಹಾಲು, ಮಾಂಸ ಎಂಬೀ ಪದಗಳನ್ನು ಓದಲು ಟೀಚರು ಸಹಾಯ ಮಾಡುವುದು. ಕೋಳಿಯ ಚಿತ್ರದ ಕೆಳಗೆ ಮಾಂಸ ಎಂದು ಮಕ್ಕಳು ಬರೆಯಲಿ. ಮೊಟ್ಟೆಯ ಚಿತ್ರ ಬಿಡಿಸಲಿ.

ಈ ಚಟುವಟಿಕೆಯ ನಂತರ ಚಟುವಟಿಕಾ ಪುಸ್ತಕದ ನನ್ನಿಂದ ಏನು ಸಿಗುತ್ತದೆ (1.8) ಚಟುವಟಿಕೆಯನ್ನು ನೀಡುವುದು.

ಮೇಲಿನ ಮೂರು ಚಟುವಟಿಕೆಗಳಿಂದ ಸಾಕು ಪ್ರಾಣಿಗಳಿಂದ ನಮಗೆ ಸಿಗುವ ಪ್ರಯೋಜನಗಳು ಯಾವುದೆಲ್ಲಾ ಎಂಬ ಆಶಯ ಮಕ್ಕಳಲ್ಲಿ ರೂಪೀಕರಿಸಲಾಯಿತು. ಇದಕ್ಕೆ ಪೂರಕವಾಗಿ ಆಸ್ವಾದನೆಗೆ ಚಟುವಟಿಕಾ ಪುಸ್ತಕದ ಕರೆದರೆ ಬರುವೆವು(1.9) ಚಟುವಟಿಕೆ ನೀಡುವುದು. ಮೊದಲೇ ತಯಾರಿಸಿದ ಮುಖವಾಡಗಳನ್ನು ಮಕ್ಕಳು ಧರಿಸಿ ಈ ಹಾಡನ್ನು ಟೀಚರ ಸಹಾಯದೊಂದಿಗೆ ಹಾಡಿ ಅಭಿನಯಿಸುವುದು. ಆಸ್ವಾದಿಸುವುದು.

ಆಖ್ಯಾನ:

ನಯನಳು ಅಂಗಳದ ಬದಿಯ ಹೂವಿನ ಗಿಡಗಳಿಗೆ ನೀರು ಹಾಕುತ್ತಿದ್ದಳು. ಗುಲಾಬಿ ಗಿಡದ ಬುಡದಲ್ಲಿ ಅಮ್ಮ ಹಾಕಿದ ಮೊಟ್ಟೆಯ ಚಿಪ್ಪುಗಳನ್ನು ಕಂಡಳು. ಒಂದು ಚಿಪ್ಪನ್ನು ತೆಗೆದುಕೊಂಡು ಅದರಲ್ಲಿ ಅಂದವಾದ ಚಿತ್ರ ಬಿಡಿಸಿದಳು. ಆಹಾ ಮೊಟ್ಟೆಯ ಚಿಪ್ಪಿನಲ್ಲಿ ಈ ರೀತಿ ಚಿತ್ರ ಬಿಡಿಸಬಹುದಲ್ಲವೇ? ಅಮ್ಮನಿಗೆ ಆಶ್ಚರ್ಯವಾಯಿತು. ಅಡುಗೆ ಕೋಣೆಯಲ್ಲಿದ್ದ ಇನ್ನೂ ಕೆಲವು ಚಿಪ್ಪುಗಳನ್ನು ಅಮ್ಮ ಅವಳಿಗೆ ಕೊಟ್ಟರು. ನಯನಳಂತೆ ನೀವೂ ನಿಮಗೆ ಇಷ್ಟವಿರುವ ಚಿತ್ರ ಬಿಡಿಸಿರಿ.

ಚಟುವಟಿಕಾ ಪುಸ್ತಕದ ನಿರ್ಮಾಣ(1.10) ಚಟುವಟಿಕೆ ನಡೆಸುವುದು. ಮೊಟ್ಟೆಯ ಚಿಪ್ಪುಗಳನ್ನು ಮಕ್ಕಳು ಸಂಗ್ರಹಿಸಿ ತರಗತಿಗೆ ತಂದು ಇಂತಹ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗುವುದು. ತರಗತಿಯಲ್ಲಿ ಪ್ರದರ್ಶಿಸುವುದು.

**ಮುಂದುವರಿದ ಚಟುವಟಿಕೆಗಳು**

ಪಾಠಪುಸ್ತಕದ 17ನೆಯ ಪುಟದಲ್ಲಿ ಕೊಟ್ಟಿರುವ ಅಕ್ಷರಗಳನ್ನುಪಯೋಗಿಸಿ ಕೊಟ್ಟಿರುವ ಕೋಣೆಯಲ್ಲಿ ಪದಗಳನ್ನು ಬರೆಯುವುದು.

ಚಟುವಟಿಕಾ ಪುಸ್ತಕದ 1.11 ಚಟುವಟಿಕೆಯನ್ನು ನೀಡುವುದು. ವರದನ ಮನೆ ಎಂಬ ವಾಕ್ಯ ಬರೆಯುವುದು ಮತ್ತು ಓದುವುದು. ಈ ಪಾಠದಲ್ಲಿ ಆರ್ಜಿಸಿದ ಪದಗಳನ್ನು ಮತ್ತು ಅಕ್ಷರಗಳನ್ನು ಗಟ್ಟಿಗೊಳಿಸಲು ಅಕ್ಷರ ಕಾರ್ಡು, ಪದ ಕಾರ್ಡುಗಳನ್ನು ಉಪಯೋಗಿಸಿ ಮಕ್ಕಳನ್ನು ಭಾಷಾ ಆಟಗಳಲ್ಲಿ ತೊಡಗಿಸುವಂತೆ ಮಾಡುವುದು. ಹೆಚ್ಚಿನ ಓದುವಿಕೆಗೆ ಸಾಧ್ಯವಾಗುವಂತಹ ಚಿತ್ರಗಳಿರುವ ಓದುವ ಸಾಮಾಗ್ರಿಗಳನ್ನು ಮಕ್ಕಳಿಗೆ ಒದಗಿಸುವುದು.

# ಘಟಕ 2

# ಕಾಡಿನತ್ತ ಪಯಣ

## ಪೀಠಿಕೆ

ನಮ್ಮ ಸುತ್ತುಮುತ್ತಲೂ ಹಲವಾರು ಜೀವಿಗಳಿವೆ. ಅವುಗಳು ಸಮಾಜದ ಅವಿಭಾಜ್ಯ ಘಟಕಗಳಾಗಿವೆ. ಮನುಷ್ಯನ ಹಲವಾರು ಪ್ರಕೃತಿ ವಿರುದ್ಧ ಚಟುವಟಿಕೆಗಳಿಂದ ಇಂದು ಹಲವು ಜೀವಿಗಳು, ಪ್ರಾಣಿ , ಪಕ್ಷಿಗಳು ಅಳಿವಿನ ಅಂಚಿನಲ್ಲಿದೆ. ಪ್ರಕೃತಿಯ ಸಮತೋಲನಕ್ಕೆ ಎಲ್ಲ ಜೀವಿಗಳ ಸಂರಕ್ಷಣೆ ಮಾಡುವುದು ಅತ್ಯಗತ್ಯ. ಹಲವಾರು ವೈವಿಧ್ಯತೆ ಇರುವ ಜೀವಿಗಳು ಹಾಗು ಹೇರಳವಾದ ಕಾಡುಗಳನ್ನು ಹೊಂದಿರುವ ನಾಡು ನಮ್ಮದು. ಆದರೆ ದುಃಖದ ಸಂಗತಿಯೆಂದರೆ ಕಾಡುಗಳು ನಾಶವಾಗಿ ನಗರಗಳು ಬೆಳೆಯುತ್ತಿವೆ.ಕಾಡುಗಳೇ ವನ್ಯಜೀವಿಗಳ ಆವಾಸ ಸ್ಥಾನವಾಗಿದ್ದರಿಂದ ಮುಗ್ಧ ಜೀವಿಗಳು ತೊಂದರೆಗೊಳಗಾಗುತ್ತಿದೆ.ಪುಟಾಣಿ ಮಕ್ಕಳಿಗೆ ಚಿಕ್ಕದಿಂದಲೇ ಪ್ರಕೃತಿ ಸ್ನೇಹ ಬೆಳೆಸುವುದು ಅತ್ಯಗತ್ಯ.ಮಕ್ಕಳು ಪ್ರಾಣಿಗಳನ್ನು, ಪಕ್ಷಿಗಳನ್ನು ಅತಿಯಾಗಿ ಇಷ್ಟಪಡುತ್ತಾರೆ. ಅವುಗಳು ಮಕ್ಕಳ ಒಡನಾಡಿಗಳು , ಪ್ರಾಣಿಗಳ, ಪಕ್ಷಿಗಳ ಶಬ್ದಗಳನ್ನು ಅನುಕರಿಸುವುದು ಹಾಗು ಅವುಗಳ ಜೊತೆಯಲ್ಲಿ ಸಮಯ ಕಳೆಯುವುದನ್ನು ಆಸ್ವಾದಿಸುತ್ತಾರೆ.

## ಕಲಿಕಾ ಉದ್ದೇಶಗಳು:

- ಅಭಿನಯ ಗೀತೆ, ಗದ್ಯಭಾಗ, ಚಿಕ್ಕ ಚಿಕ್ಕ ಕವಿತೆಗಳು ಮುಂತಾದ ವ್ಯವಹಾರ ರೂಪಗಳ ಮೂಲಕ ಭಾಷಾ ನೈಪುಣ್ಯತೆ, ಅಕ್ಷರ ಸ್ಫುಟತೆ ಮುಂತಾದ ಸಾಮರ್ಥ್ಯಗಳನ್ನು ಗಳಿಸುವುದು.
- ಕಾಡು ಪ್ರಾಣಿಗಳ ಪರಿಚಯ, ಪರಿಸರ/ವನ ಸಂರಕ್ಷಣೆ, ಪ್ರಕೃತಿಯ ಬಗ್ಗೆ ಒಲವು ಮೂಡುವುದು ಮುಂತಾದ ಪರಿಸರ ಸ್ನೇಹಿ ಮನೋಭಾವಗಳನ್ನು ಬೆಳೆಯುವುದು.

| ಆಶಯ/ ತಿಳುವಳಿಕೆ | ಭಾಷಾ ಸಾಮರ್ಥ್ಯಗಳು, ನೈಪುಣ್ಯಗಳು | ಮೌಲ್ಯಗಳು/ಮನೋಭಾವಗಳು | ಭಾಷಾ ಸತ್ಯಾಂಶಗಳು | ವ್ಯವಹಾರ ರೂಪಗಳು | ಸಂಯೋಜಿತ | ಚಟುವಟಿಕೆ | ಪುರಾವೆ |
|---|---|---|---|---|---|---|---|
| ಕಾಡು ನಮ್ಮ ಸಂಪತ್ತು<br><br>ಕಾಡನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ<br><br>ಗಿಡಗಳನ್ನು ನೆಟ್ಟು ಬೆಳೆಸಬೇಕು<br><br>ಕಾಡು ಜೀವಿಗಳನ್ನು ಸಂರಕ್ಷಿಸಬೇಕು<br><br>ಮರಗಳು ನೆರಳು, ಹಣ್ಣು ಹಂಪಲು, ಕಟ್ಟಿಗೆ, ಶುದ್ಧಗಾಳಿ ಇತ್ಯಾದಿಗಳನ್ನು ನೀಡುತ್ತದೆ.<br><br>ಪ್ರಕೃತಿ ಸ್ನೇಹವನ್ನು ಬೆಳೆಸುವುದು. | ಬಾಯ್ದೆರೆ ಓದು<br><br>ಬರವಣಿಗೆ<br><br>ಆಲಿಸುವುದು<br><br>ತಾಳಬದ್ಧವಾಗಿ ಹಾಡುವುದು<br><br>ಮಾತುಗಾರಿಕೆ | ಪರಿಸರದ ಬಗ್ಗೆ ಕಾಳಜಿ ಇದೆಂಡುವುದು.<br><br>ಕಾಡಿನ ಬಗ್ಗೆ ಕಾಡು ಪ್ರಾಣಿಗಳ ಬಗ್ಗೆ ಒಲವು ಮೂಡಿಸುವುದು | ವರ್ಣ ಮಾಲೆಯ ಪರಿಚಯ<br><br>ಇ,ಬ,ಅ, ತ,ಎ,ಉ ಎಂಬ ಅಕ್ಷರಗಳನ್ನು ಗುರುತಿಸುವುದು.<br><br>ಲ,ವ,ಮ, ರ,ನ,ದ ಎಂಬೀ ಅಕ್ಷರಗಳ ಕಾಗುಣಿತ ಅಕ್ಷರಗಳನ್ನು ಬಳಸುವುದು | ಕವಿತೆ<br><br>ಕಥೆ<br><br>ಚಿತ್ರ | ಪರಿಸರ<br><br>ಚಿತ್ರಕಲೆ<br><br>ವೃತ್ತಿ ಪರಿಚಯ | ಜೊತೆಗೊಳಿಸುವುದು<br><br>ಚಿತ್ರ ಓದು<br><br>ಪದ್ಯ ಹಾಡುವುದು<br><br>ಬಾಯ್ದೆರೆ ಓದು<br><br>ಅಕ್ಷರ, ಪದ ಗುರುತಿಸುವುದು<br><br>ಬೆರಳಚ್ಚು ಚಿತ್ರ<br><br>ಅಕ್ಷರಗಳಿಗೆ ಉರುಟು ಹಾಕುವುದು<br><br>ಸರಿಯಾದುದು ಕಂಡು ಕೊಳ್ಳುವುದು<br><br>ಬಣ್ಣ ಹಚ್ಚುವುದು<br><br>ಕಾಡು ಪ್ರಾಣಿಗಳನ್ನು ಗುರುತಿಸುವುದು<br><br>ಪದ ಸೂರ್ಯ | ಬರವಣಿಗೆ<br><br>ಓದುವಿಕೆ<br><br>ಆಲಾಪನೆ<br><br>ಬಣ್ಣ ಹಚ್ಚಿರಿ<br><br>ಬೆರಳಚ್ಚು ಚಿತ್ರ<br><br>ಅಕ್ಷರ, ಪದ ಗುರುತಿಸುವುದು |

## ಯೂನಿಟ್ ವಿಶ್ಲೇಷಣೆ

'ಕಾಡಿನತ್ತ ಪಯಣ' ಎಂಬ ಪಾಠಭಾಗದಲ್ಲಿ ನಮ್ಮ ಸುತ್ತಮುತ್ತಲೂ ಹಲವಾರು ಪ್ರಾಣಿಗಳಿವೆ.ಅವುಗಳಿಗೂ ಜೀವಿಸಲು ಅವಕಾಶವಿದೆ ಎಂಬ ಆಶಯವನ್ನು ನೀಡುತ್ತದೆ.ಅವುಗಳಿಂದ ನಮಗೆ ಹಲವಾರು ಪ್ರಯೋಜನಗಳಿವೆ. ಈ ಪಾಠಭಾಗದಲ್ಲಿ ಪರಿಸರ ಅಧ್ಯಯನಕ್ಕೂ ಭಾಷೆಗೂ ಅನುಯೋಜ್ಯವಾದ ಹಲವಾರು ಚಟುವಟಿಕೆಗಳನ್ನು ನೀಡಲಾಗಿದೆ. ಓದುವಿಕೆ, ಜೊತೆಗೊಳಿಸುವ, ಬೆರಳಚ್ಚು ಚಿತ್ರ, ಬಣ್ಣ ಹಚ್ಚುವುದು ಪದ್ಯ ಆಸ್ವಾದಿಸುವುದು. ಕಾಡಿನ ಪ್ರಯೋಜನಗಳು ಮುಂತಾದ ಚಟುವಟಿಕೆಗಳನ್ನು ನೀಡಲಾಗಿದೆ. ಅದೇ ರೀತಿಯಲ್ಲಿ ಚಟುವಟಿಕಾ ಪುಸ್ತಕದಲ್ಲಿಯೂ ಪಾಠಕ್ಕೆ ಪೂರಕವಾದ ಹಲವಾರು ಚಟುವಟುಕೆಗಳನ್ನು ನೀಡಲಾಗಿದೆ.

## ಹಾಡುವ – ಅಭಿನಯಿಸುವ

ಅಧ್ಯಾಪಿಕೆಯು ಮಕ್ಕಳಲ್ಲಿ ವೃತ್ತಾಕ್ಕಾರದಲ್ಲಿ ನಿಲ್ಲಲು ಹೇಳುವುದು.ಅಧ್ಯಾಪಿಕೆಯು ವೃತ್ತದ ನಡುವೆ ನಿಲ್ಲುವುದು.

- "ಇವತ್ತು ಕಾಡಿನಲ್ಲಿ ಮೇಳ ಹಲವಾರು ಪ್ರಾಣಿಗಳು ಪಕ್ಷಿಗಳು ಜೀವಿಗಳೆಲ್ಲಾ ಸೇರಿದ್ದಾರೆ." ಯಾವೆಲ್ಲಾ ಪ್ರಾಣಿ, ಪಕ್ಷಿಗಳು ಬಂದಿರಬಹುದು?
- ಮೇಳದಲ್ಲಿ ಏನೆಲ್ಲಾ ಇದ್ದಿರಬಹುದು ?
- ಔತಣ ಕೂಟ ಇರಬಹುದೇ? ಯಾವೆಲ್ಲಾ ತಿಂಡಿಗಳು ಇದ್ದಿರಬಹುದು ?

ಹೀಗೆ ಹಲವು ಪ್ರಶ್ನೆಗಳನ್ನು ಕೇಳುವುದು. ಬಳಿಕ ಅಧ್ಯಾಪಿಕೆಯು 'ಕಾಡಿನ ಮೇಳ' ಎಂಬ ಪದ್ಯವನ್ನುಅಭಿನಯಿಸಿ ತೋರಿಸಿಕೊಡುವುದು. ಮಕ್ಕಳ ಜೊತೆಗೆ ಅಭಿನಯಿಸುವುದು.

ಕಾಡಲ್ಲೊಂದು ಮೇಳ

ಉತ್ಸವದ ಮೇಳ

ಚೆಂಡೆ ಮದ್ದಳೆ ಮೇಳ

ಢಂ ಡಗ ಢಂ ಡಗ .......ಢಂ..ಢಂ...ಢಂ,...

ಕಾಡಲ್ಲೊಂದು ಮೇಳ

ಉತ್ಸವದ ಮೇಳ

ಕೊಂಬು ವಾದ್ಯ ಮೇಳ

ಪೆಪ್ಪರೆ...ಪೆಪ್ಪರೆ.....ಪೇ...ಪೇ....ಪೇ.....

ಕಾಡಲ್ಲೊಂದು ಮೇಳ

ಉತ್ಸವದ ಮೇಳ

ತಾಳ ಮದ್ದಳೆ ಮೇಳ

ಚಿಲ್......ಚಿಲ್..... ಚಿಲ್...ಚಿಲ್....ಚಿಲ್..

ಕಾಡಲ್ಲೊಂದು ಮೇಳ

ಉತ್ಸವದ ಮೇಳ

ವಾದ್ಯಘೋಷ ಮೇಳ

ಢಂ ಡಗ ಢಂ ಡಗ .......ಢಂ..ಢಂ...ಢಂ,...

ಪೆಪ್ಪರೆ...ಪೆಪ್ಪರೆ.....ಪೇ...ಪೇ....ಪೇ.....

ಚಿಲ್......ಚಿಲ್..... ಚಿಲ್...ಚಿಲ್....ಚಿಲ್..

## ಚಿತ್ರ ಓದು

ಪಾಠಪುಸ್ತಕ ಪುಟಸಂಖ್ಯೆ 18 ಹಾಗು 19ರಲ್ಲಿ ನೀಡಲಾದ ಚಿತ್ರದ ಆಶಯ ಪ್ರಕಟನೆಗೆ ಅನುಗುಣವಾದ ಪ್ರಶ್ನೆಗಳನ್ನು ಕೇಳುವುದು.ಕೆಲವು ಪ್ರಶ್ನೆಗಳನ್ನು ವೈಯುಕ್ತಿಕವಾಗಿಯೂ ಕೇಳುವುದು.

- ಇದು ಯಾವ ಚಿತ್ರ ?
- ಯಾವೆಲ್ಲಾ ಜೀವಿಗಳಿವೆ ?

ಮಕ್ಕಳು ಹೇಳುವ ಜೀವಿಗಳ ಹೆಸರನ್ನು ಅಧ್ಯಾಪಿಕೆಯು ಕರಿಹಲಗೆಯಲ್ಲಿ ಬರೆಯುವುದು.

## ವೈಯುಕ್ತಿಕವಾಗಿ ಓದಿಸುವುದು

ಬಳಿಕ ಮಕ್ಕಳು ತಮ್ಮ ಪಾಠಪುಸ್ತಕದಲ್ಲಿ ನೀಡಿರುವ ಜೀವಿಗಳ ಹತ್ತಿರ ಕರಿಹಲಗೆ ನೋಡಿ ಹೆಸರುಗಳನ್ನು ಬರೆಯುವುದು.

## ಆಖ್ಯಾನ

## ಅಧ್ಯಾಪಿಕೆ ಆಖ್ಯಾನವನ್ನು ಮಂಡಿಸುವುದು.

ಇಳಾ ನದಿಯ ಸಮೀಪದಲ್ಲಿ ಮಾಲೂರು ಎಂಬ ಹಳ್ಳಿ ಇದೆ. ಕೆಲವೊಮ್ಮೆ ತುಂಟ ನರಿಯೂ,ಮಿಂಕು ಮಂಗನೂ ಆನೆಯ ಬೆನ್ನೇರಿ ಹೊಳೆದಾಟಿ ಊರಿಗೆ ಹೋಗುವುದು ಉಂಟು. ಮಾದ ಆ ಊರಿನ ಹಿರಿಯಜ್ಜ ಆನೆಯೂ ಗೆಳೆಯರು

ಮಾದನ ಬಳಿಗೆ ಬಂದು ಹೋಗುವರು, ಅವರು ಬರುವಾಗ ಅವರಿಗೆ ಹೊಟ್ಟೆ ತಂಬಾ ಹಣ್ಣು ಮತ್ತು ತರಕಾರಿಗಳನ್ನು ಕೊಡುತ್ತಿದ್ದರು.ಮಾದನು ಕಟ್ಟಿಗೆ ಕಡಿಯಲು ಕಾಡಿಗೆ ಬಂದನು.ಎಲ್ಲರಿಗೂ ಹಣ್ಣುಗಳನ್ನು ತಂದನು. ಪ್ರಾಣಿ ,ಪಕ್ಷಿಗಳಿಗೆಲ್ಲಾ ಸಂತೋಷವೇ ಸಂತೋಷ.

## ಓದುವ

ಪಾಠಪುಸ್ತಕ ಪುಟ ಸಂಖ್ಯೆ 20 ರಲ್ಲಿ ನೀಡಿರುವ ಚಿತ್ರದ ಆಶಯವನ್ನು ಪ್ರಕಟಿಸಲು ಅಧ್ಯಾಪಿಕೆಯ ಪ್ರಶ್ನೆಗಳನ್ನು / ಕುಶಲಸಂಭಾಷಣೆಯನ್ನು ನಡೆಸುವುದು.

ಚಿತ್ರದಲ್ಲಿ ಏನೆಲ್ಲಾ ಇದೆ?

ಮಕ್ಕಳ ಪ್ರತಿಕ್ರಿಯೆಯನ್ನು ಕರಹಲಗೆಯಲ್ಲಿ ಬರೆಯವುದು.

ವೈಯುಕ್ತಿಕವಾಗಿ ಓದಿಸುವುದು.

ಅಧ್ಯಾಪಿಕೆಯು ಬರೆದ ಹೆಸರುಗಳನ್ನು ಮಕ್ಕಳು ತಮ್ಮ ಪಾಠಪುಸ್ತಕದಲ್ಲಿ ನೀಡಿರವ ಚಿತ್ರದ ಬಳಿ ಬರೆಯಲಿ.

ಓದುವ ಚಟುವಟಿಕೆಗೆ ನೀಡಿರವ ವಾಕ್ಯಗಳನ್ನು ಅಧ್ಯಾಪಿಕೆಯು ಚಾರ್ಟನಲ್ಲಿ ತರಗತಿಯಲ್ಲಿ ಬರೆಯುವುದು.

ಬರೆಯುವಾಗ ಗಮನಿಸಬೇಕಾದ ವಿಚಾರಗಳು

- ಅಕ್ಷರಗಳು ಬರೆಯುವ ರೀತಿ
- ಉಚ್ಛಾರ
- 
- 

ಮಕ್ಕಳು ಮುಂದೆ ಬಂದು ಒಬ್ಬೊಬ್ಬರಾಗಿ ಓದುವುದು.

ಅಧ್ಯಾಪಿಕೆ ಹೇಳಿದ ಪದಗಳನ್ನು ಮಗು ಮುಟ್ಟಿ ತೋರಿಸುವುದು.

ಅಕ್ಷರಗಳನ್ನು ಪತ್ತೆ ಹಚ್ಚುವುದು.

ಪುನಾರಾವರ್ತಿತ ಪದಗಳನ್ನು ಕಂಡುಹಿಡಿಯುವುದು.

ಮಕ್ಕಳು ಪಾಠಭಾಗವನ್ನು ವೈಯುಕ್ತಿಕವಾಗಿ ಓದಲಿ.

## ಮೌಲ್ಯಮಾಪನ

- ವಾಕ್ಯಪೂರ್ತಿಯಾಗಿ ತಪ್ಪಿಲ್ಲದೆ ಓದುವುದು.
- ಗಟ್ಟಿಯಾಗಿ ಸ್ಪಷ್ಟವಾಗಿ ಓದುವುದು.

## ಆಖ್ಯಾನ

ಒಂದು ದಿನ ಮಾದ ಕಟ್ಟಿಗೆ ಸಂಗ್ರಹಿಸಲು ಕಾಡಿಗೆ ಬಂದನು. ಅತ್ತ ಇತ್ತ ಸುತ್ತಾಡಿ ಸ್ವಲ್ಪ ಕಟ್ಟಿಗೆಯನ್ನು ಸಂಗ್ರಹಿಸಿದನು. ಅವನು ಕಾಡಿನಲ್ಲಿ ಸುತ್ತಾಡುವಾಗ ಹಲವಾರು ಮರಗಳನ್ನು ಕಂಡನು. ಯಾವೆಲ್ಲಾ ಮರಗಳನ್ನು ಕಂಡನು?

ಮರಗಳಿಂದ ನಮಗೆ ಏನು ಸಿಗುತ್ತದೆ? ಬನ್ನಿ ತಿಳಿಯೋಣ.

## ಹಾಡುವ 2.1

ಚಟುವಟಿಕಾ ಪುಸ್ತಕದಲ್ಲಿ ನೀಡಿರುವ ಪದ್ಯವನ್ನು ರಾಗವಾಗಿ ಹಾಡುವುದು. ಅಧ್ಯಾಪಿಕೆಯ ಜೊತೆಯಲ್ಲಿ ಹಾಡುವುದು.

## ಬರೆಯುವ 2.2

ಚಟುವಟಿಕಾ ಪುಸ್ತಕದ ಪುಟ ಸಂಖ್ಯೆ 22ರಲ್ಲಿ ನೀಡಿರುವ ವಾಕ್ಯವನ್ನು ಪೂರ್ತಿಗೊಳಿಸುವುದು.

ಮರಗಳಿಂದ ಏನೆಲ್ಲಾ ಪ್ರಯೋಜನಗಳಿವೆ? ಎಂದು ಚರ್ಚೆ ನಡೆಸುವುದು. ಚಿತ್ರದ ಆಧಾರದಲ್ಲಿ ವಾಕ್ಯ ಪೂರ್ತಿಗೊಳಿಸುವುದು.

ಮರ ಹಣ್ಣು ಕೊಡುತ್ತದೆ.

ಮರ ನೆರಳು ಕೊಡುತ್ತದೆ.

ಮರ ಕಟ್ಟಿಗೆ ಕೊಡುತ್ತದೆ.

## ವೃತ್ತಿ ಪರಿಚಯ

ಬೆರಳಚ್ಚು ಚಿತ್ರ ಬಿಡಿಸಿರಿ, ಬಣ್ಣ ಹಚ್ಚುವ

ಪಾಠಪುಸ್ತಕದ ಪುಟ ಸಂಖ್ಯೆ 22ರಲ್ಲಿ ನೀಡಿರುವ ಬೆರಳಚ್ಚು ಚಿತ್ರವನ್ನು ನೋಡುವುದು.

ಯಾವೆಲ್ಲಾ ಚಿತ್ರಗಳಿವೆ? ಮಕ್ಕಳು ಬಾಯ್ದೆರೆಯಾಗಿ ಹೇಳುವರು. ಅಧ್ಯಾಪಕರ ಸಹಾಯದೊಂದಿಗೆ ಅನನಾಸು ಹಾಗೂ ಇಲಿಯ ಬೆರಳಚ್ಚು ಚಿತ್ರವನ್ನು ಪಾಠಪುಸ್ತಕದಲ್ಲಿ ಬಿಡಿಸುವುದು. ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಪ್ರತಿ ಗುಂಪಿನಲ್ಲೂ ಪ್ರತಿ ಮಗುವಿಗೂ ಚಾರ್ಟಿನ ತುಂಡನ್ನು ನೀಡುವುದು.ಸ ಗುಂಪ್ನಲ್ಲಿ ಚರ್ಚೆ ನಡೆಸಿ ಬೇರೆ ಬೇರೆ ಬೆರಳಚ್ಚು ಚಿತ್ರಗಳನ್ನು ಬಿಡಿಸುವುದು. ಬಣ್ಣ ಹಚ್ಚಿ ಅಂದಗೊಳಿಸಲಿ.

## ಓದುವ ಬರೆಯುವ 2.3

ಚಟುವಟಿಕಾ ಪುಸ್ತಕದಲ್ಲಿ ಪುಟ ಸಂಖ್ಯೆ 23ರಲ್ಲಿ ನೀಡಿರುವ ಪದಗಳನ್ನು ವೈಯಕ್ತಿಕವಾಗಿ ಓದುವುದು. (ಒಬ್ಬೊಬ್ಬರು ಮುಂದೆ ಬಂದು ಓದಲಿ)ಓದಿದ ಪದಗಳನ್ನು ಸೇರಿಸಿ ಬರೆಯುವುದು.

ಎರಡು ಇಲಿ

ಇದು ಎಲೆ

## ಕಾಡು ಪ್ರಾಣಿಗಳಿಗೆ ಉರುಟು ಹಾಕಿರಿ 2.4

ಚಟುವಟಿಕಾ ಪುಸ್ತಕದ ಪುಟ ಸಂಖ್ಯೆ 24ರಲ್ಲಿ ನೀಡಿರುವ ಪ್ರಾಣಿಗಳ ಹೆಸರುಗಳನ್ನು ಬಾಯ್ದೆರೆಯಾಗಿ ಹೇಳಲಿ. ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆಯುವುದು.. ಓದಿಸುವುದು. ಕೊಟ್ಟಿರುವ ಚಿತ್ರದಲ್ಲಿ  ಕಾಡುಪ್ರಾಣಿಗಳನ್ನು ಪತ್ತೆಹಚ್ಚಿ ಉರುಟು ಹಾಕುವುದು.

## ಆಖ್ಯಾನ

ಮಾದನು ಕಟ್ಟಿಗೆಗಳನ್ನು ಹೆಕ್ಕಿ ಸುಸ್ತಾಯಿತು. ಅವನಿಗೆ ಬಹಳ ಹಸಿವಾಗಿತ್ತು. ಸುತ್ತಲೂ ಆಹಾರಕ್ಕಾಗಿ ಹುಡುಕಾಡಿದನು. ಮುಂದೆ ಮುಂದೆ ನಡೆದಾಗ ಹಣ್ಣುಗಳಿಂದ ತುಂಬಿದ ಮಾವಿನ ಮರ, ಹಲಸಿನ ಮರ, ನೇರಳೆ ಮರ ಮುಂತಾದ ಮರಗಳನ್ನು ಕಂಡನು. ಅವನು ಹಣ್ಣುಗಳನ್ನು ಕೊಯ್ದು ತಿಂದು ಇಳಾ ನದಿಯ ನೀರು ಕುಡಿದು ಹಸಿವೆ ನೀಗಿಸಿದನು. ಮರದ ನೆರಳಲ್ಲಿ ಕುಳಿತು ವಿಶ್ರಮಿಸಿದನು.

## ಬಣ್ಣ ಹಚ್ಚಿರಿ

ಪಾಠಪುಸ್ತಕದ ಪುಟಸಂಖ್ಯೆ 23ರಲ್ಲಿ ನೀಡಿರುವ ಚಿತ್ರಗಳಿಗೆ ಬಣ್ಣ ಹಚ್ಚಿ ಚಂದಗೊಳಿಸುವುದು.

## ಬಣ್ಣ ಹಚ್ಚುವ 2.5

ಚಟುವಟಿಕಾ ಪುಸ್ತಕದಲ್ಲಿ ನೀಡಿರುವ ಜಿಂಕೆಯ ಚಿತ್ರಕ್ಕೆ ಬಣ್ಣ ಹಚ್ಚಿ ಅಂದಗೊಳಿಸುವುದು.

ಅಧ್ಯಾಪಿಕೆಯು ಚಾರ್ಟಿನಲ್ಲಿ ಚಿತ್ರ ಬಿಡಿಸಿ ತೋರಿಸುವುದು. ಮಕ್ಕಳು ಚಟುವಟಿಕಾ ಪುಸ್ತಕದಲ್ಲಿ ಬಿಡಿಸಲಿ. ಬಣ್ಣ ಹಚ್ಚಿ ಅಂದಗೊಳಿಸುವುದು.

## ಆಖ್ಯಾನ:

ಮಾದನು ಮರದಡಿಯಲ್ಲಿ ಮಲಗಿರುವಾಗ ಸರಸರನೆ ಸದ್ದು ಕೇಳಿ ಎಚ್ಚರಗೊಂಡನು.ಅವನಿಗೆ ಭಯವಾಯಿತು. ಯಾರನ್ನು ಕರೆಯುವುದು? ಪಿಂಕೂ… ಪಿಂಕೂ ಎಂದು ಕೂಗುತ್ತಾ ಆಲದ ಮರದ ಕಡೆಗೆ ಓಡಿದನು.

ಮಾದ… ಮಾದ ಏನಾಯಿತು. ? ಪಿಂಕು ಕೇಳಿತು. ಅದೋ ಅಲ್ಲಿ ಏನೋ ಸರಸರ ಸದ್ದು, ನನಗೆ ಹೆದರಿಕೆ ಆಯಿತು. ಯಾಕೆ ಹೆದರಿಕೆ? ನಿನ್ನ ಸಹಾಯಕ್ಕೆ ನಾವೆಲ್ಲರೂ ಇದ್ದೇವೆ. ಆನೆ ಸೊಂಡಿಲೆತ್ತಿ ಹೇಳಿತು. ಆದರೂ ನನ್ನ ಕಟ್ಟಿಗೆ ಅಲ್ಲಿಯೇ ಬಾಕಿಯಾಯಿತು. ಮಾದ ಬೇಸರದಿಂದ ಹೇಳಿದನು.. ಮಂಗಣ್ಣ ಬಾ ನಾವು ಹೋಗಿ ಮಾದನ ಕಟ್ಟಿಗೆ ತರೋಣ ಆನೆ ಹೇಳಿತು. ನಾನೂ ಬರುತ್ತೇವೆ. ಇಲಿ ಹೇಳಿತು. ಮರಕುಟಿಗ, ಗಿಳಿ ಹಾರಿ ಮುಂದೆ ಹೋದವು. ಅಳಿಲು ಮಂಗ ಆನೆಯ ಬೆನ್ನ ಮೇಲೆ ಏರಿದವು ಇಲಿಯು ಆನೆಯ ಬಾಲದಲ್ಲಿ ತೂಗಾಡಿತು. ಗಿಡುಗಾ ನೀನು ಮಾದನಿಗೆ ಕಾವಲಾಗಿ ಇಲ್ಲೇ ಇರು ಎಂದು ಕಾಗೆ ಹೇಳಿತು. ಎಲ್ಲರೂ ಕಟ್ಟಿಗೆ ತರಲು ಹೋದಾಗ ಕಟ್ಟಿಗೆಯ ಮೇಲೆ ಒಂದು ನಾಗರಹಾವು ಮಲಗಿತ್ತು ನೀನಿನ್ನು ಇಲ್ಲೇ ಇರುವೆಯಾ ಮಾದ ನಿನ್ನನ್ನು ಕಂಡು ಹೆದರಿದ್ದಾನೆ ಮಂಗ ಹೇಳಿತು ಹಾವು ದೂರ ಸರಿಯಿತು. ಕಟ್ಟಿಗೆ ತಂದು ಮಾದನಿಗೆ ಕೊಟ್ಟರು. ಮಾದನು ಸಂತೋಷದಿಂದ ಹಳ್ಳಿಗೆ ಹಿಂತಿರುಗಿದನು.

## ಅಡಗಿರುವವರು ಯಾರೆಲ್ಲಾ ?

ಚಟುವಟಿಕಾ ಪುಸ್ತಕದಲ್ಲಿ ಪುಟ ಸಂಖ್ಯೆ 26ರಲ್ಲಿ ನೀಡಿರುವ ಚಟುವಟಿಕೆಯನ್ನು ಪೂರ್ತಿಗೊಳಿಸುವುದು. ಅಡಗಿರುವ ಜೀವಿಗಳ ಹೆಸರುಗಳನ್ನು ಮಕ್ಕಳು ವೈಯಕ್ತಿಕವಾಗಿ ಬರೆಯುವುದು.

## ಆಖ್ಯಾನ

ಒಂದು ದಿನ ಪ್ರಾಣಿ ಪಕ್ಷಿಗಳೆಲ್ಲಾ ಆಲದ ಮರದಡಿಯಲ್ಲಿ ಸೇರಿ ಕಣ್ಣಮುಚ್ಚಾಲೆ ಆಡುತ್ತಿದ್ದವು.ಆಟದಲ್ಲಿ ಆಮೆ, ಇಲಿ, ಇರುವೆ, ಆನೆ, ಕಾಗೆ, ಮಂಗ ಸೇರಿದ್ದರು. ಮಂಗ ಕಣ್ಣು ಮುಚ್ಚಿತು. ಉಳಿದವರು ಅಡಗಿದರು. ಕಣ್ಣಾಮುಚ್ಚೇ ಕಾಡೇ ಗೂಡೇ ಉದ್ದಿನ ಮೂಡೆ ಉರಳೇ ಹೋಯ್ತು ನಮ್ಮಯ ಹಕ್ಕಿ ಬಿಟ್ಟೇ ಬಿಟ್ಟೆ. ನಿಮ್ಮಯ ಹಕ್ಕಿ ಅಡಗಿಸಿ ಕೊಳ್ಳಿ ಕೂ… ಎಂದು ಮಂಗ ಕಣ್ಣು ತೆರೆದು ಗೆಳೆಯರನ್ನು ಹುಡುಕತೊಡಗಿತು. ಗೆಳೆಯರೆಲ್ಲಾ ಸಂತೋಷವೇ ಸಂತೋಷ.

## ಹಾಡುವ

ಪಾಠಪುಸ್ತಕದ ಪುಟ ಸಂಖ್ಯೆ 24ರಲ್ಲಿ ನೀಡಿರುವ ಚಿತ್ರ ನಿರೀಕ್ಷಿಸುವುದು. ಕಂಡ ವಿಚಾರಗಳನ್ನು ಬಾಯ್ದೆರೆಯಾಗಿ ಮಕ್ಕಳು ಹೇಳಲಿ. ಅಧ್ಯಾಪಿಕೆ ಪದ್ಯವನ್ನು ಚಾರ್ಟಿನಲ್ಲಿ ಬರೆದು ತರಗತಿಯಲ್ಲಿ ತೂಗು ಹಾಕುವುದು.ಅಧ್ಯಾಪಕಿ ಓದುವುದು. ಮಕ್ಕಳು ಗಮನಿಸಲಿ. ಅಧ್ಯಾಪಿಕೆ ರಾಗವಾಗಿ ಹಾಡುವುದು. ಮಕ್ಕಳು ಪಾಠಪುಸ್ತಕ ನೋಡುತ್ತಾ ಹಾಡಲಿ. ಆಮೇಲೆ ಅಧ್ಯಾಪಿಕೆ ಹಾಗೂ ಮಕ್ಕಳು ಒಟ್ಟಾಗಿ ಅಭಿನಯಿಸಿ ಹಾಡುವುದು.ತರಗತಿಯ ಮಕ್ಕಳನ್ನು 4 ಅಥವಾ 5 ಮಕ್ಕಳ ಗುಂಪಗ ಮಾಡಿ ಗುಂಪಿನಲ್ಲಿ ಹಾಡುವುದು.

ಗುಂಪು ಹಾಡುವಿಕೆಯನ್ನು ಮೌಲ್ಯಮಾಪನ ಮಕ್ಕಳು ಸ್ವತಃ ಮಾಡುವುದು.

## ಮೌಲ್ಯಮಾಪನ

ಗುಂಪಿನಲ್ಲಿ ಎಲ್ಲರೂ ಹಾಡುವುದು

ಉಚ್ಛಾರ ಸ್ಪಷ್ಟತೆಯೋಂದಿಗೆ ಹಾಡುವುದು

ರಾಗ ತಾಳದೊಂದಿಗೆ ಹಾಡುವುದು.

## ಸಚಿತ್ರ 2

ಎಲ್ಲರೂ ಆಟಕ್ಕೆ ಬಂದರು

ಆನೆ ಆಡಿ ಆಡಿ ಬಂತು

ಆಮೆ ಮೆಲ್ಲ ಮೆಲ್ಲನೆ ಬಂತು

ಇಲಿ ಓಡಿ ಓಡಿ ಬಂತು

ಇರುವೆ ಸಾಲಾಗಿ ಬಂತು

ಮೊಲ ಜಿಗಿದು ಜಿಗಿದು ಬಂತು

ಮಾವಿನ ಮರದಡಿ ಆಡಿದರು.

## ಆ ಅಕ್ಷರದ ಪದಗಳಿಗೆ ಉರುಟು ಹಾಕಿರಿ ಬರೆಯಿರಿ

ಪಾಠಪುಸ್ತದಕಲ್ಲಿ ನೀಡಿರುವ ಚಟುವಟಿಕೆಯನ್ನು ಬರೆಯುವುದು. ಕೊಟ್ಟಿರುವ ಪದಗಳಲ್ಲಿ ಆ ಅಕ್ಷರದಿಂದ ಪ್ರಾರಂಭಗೊಳ್ಳುವ ಪದಗಳನ್ನು ಪತ್ತೆಹಚ್ಚಿ ಉರುಟು ಹಾಕುವುದು ಹಾಗೂ ಕೊಟ್ಟಿರುವ ಜಾಗದಲ್ಲಿ ಅವುಗಳನ್ನು ಬರೆಯುವುದು.

## ಅಕ್ಷರ ಮರ 2.7

ಚಟುವಟಿಕಾ ಪುಸ್ತಕ ಪುಟ ಸಂಖ್ಯೆ 27ರ ಅಕ್ಷರ ಮರವನ್ನು ನಿರೀಕ್ಷಿಸಿ ಅರ್ಥವತ್ತಾದ ಪದಗಳನ್ನು ಕೆಳಗೆ ನೀಡಲಾದ ಜಾಗದಲ್ಲಿ ಸ್ವತಃ ಮಗು ಬರೆದು ತುಂಬಿಸುವುದು.

ನಾಯಿ

ಎಲೆ

## ಉರುಟು ಹಾಕಿರಿ 2.8

ಚಟುವಟಿಕಾ ಪುಸ್ತಕದಲ್ಲಿ ನೀಡಿರುವ (ಪುಟ ಸಂಖ್ಯೆ 28) ಚಟುವಟಿಕೆ ನಡೆಸಬೇಕಾದ ಸೂಚನೆಯನ್ನು ಅಧ್ಯಾಪಿಕೆ ಓದಿ ಹೇಳುವುದು. ಆ ಅಕ್ಷರದಿಂದ ಪ್ರಾರಂಭವಾಗುವ ಚಿತ್ರಗಳಿಗೆ ಉರುಟು ಹಾಕಲು ಸಹಾಯ ಬೇಕಾದಲ್ಲಿ ಅಧ್ಯಾಪಿಕೆ ಮಾರ್ಗದರ್ಶನ ನೀಡುವುದು.

## ಅಚ್ಚು ತೆಗೆಯುವ ಚಿತ್ರ ರಚಿಸುವ 2.9

ಚಟುವಟಿಕಾ ಪುಸ್ತಕದಲ್ಲಿ ಪುಟ ಸಂಖ್ಯೆ 29ರಲ್ಲಿ ನೀಡಿರುವ ಬೆರಳಚ್ಚು ಬಳಸಿ ಚಿತ್ರಗಳನ್ನು ರಚಿಸುವುದು

ಈ ಚಟುವಟಿಕೆ ನಡೆಸಬೇಕಾದ ಸೂಚನೆಗಳನ್ನು ಅಧ್ಯಾಪಿಕೆ ಓದಿ ಹೇಳುವುದು. ಇರುವೆ, ದ್ರಾಕ್ಷೆ, ಇಲಿ, ಹಕ್ಕಿ, ಹುಳ ಮುಂತಾದ ಚಿತ್ರವನ್ನು ಬಿಡಿಸುವುದು. ಸಹಾಯ ಬೇಕಾದಲ್ಲಿ ಅಧ್ಯಾಪಿಕೆ ಸಹಾಯಿಸುವುದು.

## ಕಾಡಿನಲ್ಲಿ ಏನೆಲ್ಲಾ ?

ಕಾಡಿನಿಂದ ಇರುವ ಪ್ರಯೋಜನಗಳನ್ನು ಚರ್ಚೆ ನಡೆಸುವುದು. ಮಕ್ಕಳು ಹೇಳುವ ಉತ್ತರಗಳನ್ನು ಅಧ್ಯಾಪಿಕೆಯು ಕರಿಹಲಗೆಯಲ್ಲಿ ಬರೆಯುವುದು

ಕಟ್ಟಿಗೆ

ಹಣ್ಣುಗಳು

ಶುದ್ಧಗಾಳಿ

ಪಾಠಪುಸ್ತಕಗಲ್ಲಿ ನೀಡಿರುವ ಸರಿಯಾದ ಚಿತ್ರಕ್ಕೆ ಗುರುತು ಹಾಕುವುದು. ಮಕ್ಕಳು ಗುರುತು ಹಾಕಿರುವುದನ್ನು ಅಧ್ಯಾಪಿಕೆಯು ಮೌಲ್ಯಮಾಪನ ಮಾಡುವುದು.

**ಹಾಡುವ ನಲಿಯುವ(2.10)**

ಅಧ್ಯಾಪಿಕೆ ಪದ್ಯವನ್ನು ಚಾರ್ಟಿನಲ್ಲಿ ಬರೆದು ತರಗತಿಯಲ್ಲಿ ತೂಗು ಹಾಕುವುದು. ಅಧ್ಯಾಪಿಕೆ ಓದುವುದು. ಮಕ್ಕಳು ಗಮನಿಸುವುದು. ಅಧ್ಯಾಪಿಕೆ ರಾಗವಾಗಿ ಹಾಡುವುದು. ಮಕ್ಕಳು ಪಾಠಪುಸ್ತಕ ನೋಡುತ್ತಾ ಹಾಡುವುದು. ಆಮೇಲೆ ಮಕ್ಕಳು ಅಧ್ಯಾಪಿಕೆಯ ಜೊತೆಯಲ್ಲಿ ಅಭಿನಯಿಸಿ ಹಾಡುವುದು.

**ಪದ ಬರೆಯುವ(2.11)**

ಚಟುವಟಿಕಾ ಪುಸ್ತಕದಲ್ಲಿ ನೀಡಿರುವ ಚಟುವಟಿಕೆಯನ್ನು ಅಧ್ಯಾಪಿಕೆ ಓದಿ ಹೇಳುವುದು. ಉರುಟು ಹಾಕಿದ ಅಕ್ಷರವನ್ನು ಬದಲಿಸಿ ಬೇರೆ ಅರ್ಥವತ್ತಾದ ಪದವನ್ನು ಮಕ್ಕಳು ವೈಯಕ್ತಿಕವಾಗಿ ಬರೆಯುವುದು. ಸಹಾಯ ಬೇಕಾದಲ್ಲಿ ಅಧ್ಯಾಪಿಕೆಯು ಮಾರ್ಗದರ್ಶನ ನೀಡುವುದು.

ಉದಾ: ನಲಿ   ಬಾಲ

ಇಲಿ   ಆಲ

**ಅಂದವಾದ ಎಲೆ(2.12)**

ಅಧ್ಯಾಪಿಕೆಯು ಸೂಚನೆಗಳನ್ನು ಓದುವುದು. ಮಕ್ಕಳು ಚುಕ್ಕೆಗಳನ್ನು ಜೋಡಿಸಿ ಚಿತ್ರವನ್ನು ಪೂರ್ತಿಗೋಳಿಸುವುದು. ಚಿತ್ರಕ್ಕೆ ಅಂದವಾಗಿ ಬಣ್ಣ ಹಚ್ಚಿ ಹೆಸರು ಬರೆಯುವುದು.

ಎಲೆ ಎಂಬ ಪದವನ್ನು ಬರೆದು ಕೆಳಗೆ ನೀಡಿದ ಪದಗಳನ್ನು ಪೂರ್ತಿಗೊಳಿಸುವುದು

ಮಾವಿನ ಎಲೆ

ಬಾಳೆ ಎಲೆ

ಅಧ್ಯಾಪಿಕೆಯ ಸಹಾಯ ಬೇಕಾದಲ್ಲಿ ಸಹಾಯ ನೀಡುವುದು.

**ಬರೆಯುವ ಓದುವ**

ಪಾಠಪುಸ್ತಕ ಪುಟ ಸಂಖ್ಯೆ 27 ರಲ್ಲಿ ನೀಡಿರುವ ಚಟುವಟಿಕೆಯನ್ನು ಅಧ್ಯಾಪಿಕೆ ಓದಿ ಹೇಳುವುದು.

ಎಲೆ ಎಂದು ಬರೆದ ಚುಕ್ಕಿಗಳನ್ನು ಸೇರಿಸುವುದು ಹಾಗೂ ಎಲೆಗೆ ಬಣ್ಣ ಹಚ್ಚುವುದು.

ಮಕ್ಕಳು ತಮ್ಮ ಪಾಠಪುಸ್ತಕದಲ್ಲಿ ಬಣ್ಣ ಹಚ್ಚುವುದು.

### ಓದುವ

ಪಾಠಪುಸ್ತಕದಲ್ಲಿ ನೀಡಿರುವ ವಾಕ್ಯವನ್ನು ಓದುವುದು. ಪುನರಾವರ್ತಿಸಿ ಬಂದ ಪದಗಳನ್ನು ಪತ್ತೆಹಚ್ಚಿ ಮಕ್ಕಳು ಸ್ವತಃ ಉರುಟು ಹಾಕುವುದು. ಒಂದೊಂದು ಮಗುವಿನಿಂದ ವೈಯಕ್ತಿಕವಾಗಿ ಓದಿಸುವುದು.

ಅಧ್ಯಾಪಿಕೆ ಸಹಾಯ ಬೇಕಾದಲ್ಲಿ ಸಹಾಯಿಸುವುದು.

ಬರವಣಿಗೆ

ಎಲೆ

ಮರದ

ಉದುರಿತು

ಎಲೆ ಎಂಬ ಪದವು ಹಲವು ಬಾರಿ ಪುನರಾವರ್ತಿಸಿದ ಕಾರಣ ಅಧ್ಯಾಪಿಕೆಯ ನೆರವಿಲ್ಲದೆ ಮಕ್ಕಳು ಸ್ವತಃ ಬರೆಯುವರು.

## 2.13 ಬರೆಯುವ

ಇದು ಪಾಠದಲ್ಲಿ ಅಕ್ಷರಗಳನ್ನು ಸೇರಿಸಿ ಪದಗಳನ್ನು ಮಾಡುವ ಚಟುವಟಿಕೆಯಾಗಿದೆ. ಮ ಹಾಗೂ ಇ ಎಂಬ ಅಕ್ಷರದ ಪದಗಳನ್ನು ಚಟುವಟಿಕಾ ಪುಸ್ತಕದಲ್ಲಿ ಮಕ್ಕಳುಪೂರ್ತಿಗೊಳಿಸುವುದು.

ಮ ಹಾಗೂ ಇ ಅಕ್ಷರದ ಪದಸೂರ್ಯ

ಮ ಹಾಗೂ ಇ ಅಕ್ಷರದ ಇನ್ನಷ್ಟು ಪದಗಳನ್ನು ಕಂಡುಕೊಂಡು ನೋಟುಪುಸ್ತಕದಲ್ಲಿ ಅಧ್ಯಾಪಿಕೆಯ ಸಹಾಯದೊಂದಿಗೆ ಮಕ್ಕಳು ಬರೆಯುವುದು.

## 2.14 ಬಣ್ಣ ಹಚ್ಚುವ

ಚಟುವಟಿಕಾ ಪುಸ್ತಕದಲ್ಲಿ ನೀಡಲಾದ ಚಿತ್ರವನ್ನು ಮಕ್ಕಳು ವೀಕ್ಷಿಸುವುದು.

ಯಾವೆಲ್ಲಾ ಪ್ರಾಣಿಗಳಿವೆ?

ಇವುಗಳು ಎಲ್ಲಿ ಜೀವಿಸುತ್ತವೆ?

ಕಾಡಿನಲ್ಲಿ ಬದುಕುವ ಇತರ ಜೀವಿಗಳು ಯಾವುದೆಲ್ಲಾ?

ಅಧ್ಯಾಪಕರ ಸಹಾಯದೊಂದಿಗೆ ಮಕ್ಕಳು ಚಟುವಟಿಕಾ ಪುಸ್ತಕದಲ್ಲಿ ನೀಡಿರುವ ಪ್ರಾಣಿಗಳಿಗೆ ಬಣ್ಣ ಹಚ್ಚುವುದು

# ಘಟಕ 4

# ಮಳೆಯೋ ಮಳೆ

### ಮಳೆ ಬರಿಸುವ ಅಭಿನಯ

ತರಗತಿಯ ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸುವುದು. ಮಕ್ಕಳು ತಮ್ಮ ಎಡಕೈಯ ಅಂಗೈಗೆ ಬಲಕೈಯ ಒಂದು ಬೆರಳಿನಿಂದ ಬಡಿಯುತ್ತಾ ಸದ್ದು ಮಾಡಲಿ. ಹೀಗೆ ಬೆರಳುಗಳ ಸಂಖ್ಯೆಯನ್ನು 5ರ ವರೆಗೆ ಅಧ್ಯಾಪಕರ ಸೂಚನೆಯಂತೆ ಹೆಚ್ಚಿಸುತ್ತಾ ಬಡಿಯಲಿ. ನಂತರ 5ರಿಂದ 1ರವರೆಗೆ ಕಡಿಮೆಗೊಳಿಸುತ್ತಾ ಬಡಿಯಲಿ.

W.S 4.7

### ಚಿತ್ರ ಓದು

ಪಾಠಭಾಗದ (ಪುಟ ಸಂಖ್ಯೆ40) ಚಿತ್ರದ ಆಶಯ ಪ್ರಕಟಣೆಗೆ ಅನುಗುಣವಾದ ಪ್ರಶ್ನೆಗಳನ್ನು ಕೇಳುವುದು. ಕೆಲವು ಪ್ರಶ್ನೆಗಳನ್ನು ತರಗತಿಗೆ ಒಟ್ಟಾಗಿಯೂ, ಕೆಲವು ಪ್ರಶ್ನೆಗಳನ್ನು ವೈಯಕ್ತಿಕವಾಗಿಯೂ ಕೇಳುವುದು. ಮಕ್ಕಳು ವಾಕ್ಯದಲ್ಲಿ ಉತ್ತರ ಹೇಳಲಿ. ಅಧ್ಯಾಪಕರು ಸಹಾಯ ಮಾಡುವುದು.

ಉದಾ : ಆಮೆ ಏನು ಮಾಡುತ್ತಿದೆ?

ಕಪ್ಪೆಯಲ್ಲಿ ಏನೋ ಹೇಳುತ್ತಿದೆ.

### ಆಖ್ಯಾನ:

ಚಂದನ ನದಿಯಲ್ಲಿ ತುಂಬಾ ನೀರು ಇತ್ತು. ಆ ನೀರಿನಲ್ಲಿಹಲವಾರು ಜೀವಿಗಳು ಇದ್ದುವು. ಯಾವೆಲ್ಲ ಜೀವಿಗಳಿರಬಹುದು? (F. R).

ಹೌದು ಮೀನು ಕಪ್ಪೆ ಏಡಿ ಆಮೆ ಇತ್ಯಾದಿ. ಅವುಗಳು ಬಹಳ ಸಂತೋಷದಿಂದ ಇದ್ದುವು. ಮುಂದೇನಾಯಿತು ನೋಡೋಣ.

| ಆಶಯ/ ತಿಳುವಳಿಕೆ | ಭಾಷಾ ಸಾಮರ್ಥ್ಯಗಳು, ನೈಪುಣ್ಯಗಳು | ಮೌಲ್ಯಗಳು/ಮನೋಭಾವಗಳು | ಭಾಷಾ ಸತ್ಯಾಂಶಗಳು | ವ್ಯವಹಾರ ರೂಪಗಳು | ಸಂಯೋಜಿತ | ಚಟುವಟಿಕೆ | ಪುರಾವೆ |
|---|---|---|---|---|---|---|---|
| ಮಳೆ<br><br>ಕಾಡನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ<br><br>ಗಿಡಗಳನ್ನು ನೆಟ್ಟು ಬೆಳೆಸಬೇಕು<br><br>ಕಾಡು ಜೀವಿಗಳನ್ನು ಸಂರಕ್ಷಿಸಬೇಕು<br><br>ಮರಗಳು ನೆರಳು, ಹಣ್ಣು ಹಂಪಲು, ಕಟ್ಟಿಗೆ, ಶುದ್ಧಗಾಳಿ ಇತ್ಯಾದಿಗಳನ್ನು ನೀಡುತ್ತದೆ.<br><br>ಪ್ರಕೃತಿ ಸ್ನೇಹವನ್ನು ಬೆಳೆಸುವುದು. | ಬಾಯ್ದೆರೆ ಓದು<br><br>ಬರವಣಿಗೆ<br><br>ಆಲಿಸುವುದು<br><br>ತಾಳಬದ್ಧವಾಗಿ ಹಾಡುವುದು<br><br>ಮಾತುಗಾರಿಕೆ | ಪರಿಸರದ ಬಗ್ಗೆ ಕಾಳಜಿ ಇದೊಡುವುದು.<br><br>ಕಾಡಿನ ಬಗ್ಗೆ ಕಾಡು ಪ್ರಾಣಿಗಳ ಬಗ್ಗೆ ಒಲವು ಮೂಡಿಸುವುದು | ವರ್ಣ ಮಾಲೆಯ ಪರಿಚಯ<br><br>ಇ,ಬ,ಅ, ತ,ಎ,ಉ ಎಂಬ ಅಕ್ಷರಗಳನ್ನು ಗುರುತಿಸು ವುದು.<br><br>ಲ,ವ,ಮ, ರ,ನ,ದ ಎಂಬೀ ಅಕ್ಷರಗಳ ಕಾಗುಣಿತ ಅಕ್ಷರಗಳನ್ನು ಬಳಸು ವುದು | ಕವಿತೆ<br><br>ಕಥೆ<br><br>ಚಿತ್ರ | ಪರಿಸರ<br><br>ಚಿತ್ರಕಲೆ<br><br>ವೃತ್ತಿ ಪರಿಚಯ | ಜೊತೆಗೊಳಿಸುವುದು<br><br>ಚಿತ್ರ ಓದು<br><br>ಪದ್ಯ ಹಾಡುವುದು<br><br>ಬಾಯ್ದೆರೆ ಓದು<br><br>ಅಕ್ಷರ, ಪದ ಗುರುತಿಸುವುದು<br><br>ಬೆರಳಚ್ಚು ಚಿತ್ರ<br><br>ಅಕ್ಷರಗಳಿಗೆ ಉರುಟು ಹಾಕುವುದು<br><br>ಸರಿಯಾದುದು ಕಂಡು ಕೊಳ್ಳುವುದು<br><br>ಬಣ್ಣ ಹಚ್ಚುವುದು<br><br>ಕಾಡು ಪ್ರಾಣಿಗಳನ್ನು ಗುರುತಿಸುವುದು<br><br>ಪದ ಸೂರ್ಯ | ಬರವಣಿಗೆ<br><br>ಓದುವಿಕೆ<br><br>ಆಲಾಪನೆ<br><br>ಬಣ್ಣ ಹಚ್ಚಿರಿ<br><br>ಬೆರಳಚ್ಚು ಚಿತ್ರ<br><br>ಅಕ್ಷರ, ಪದ ಗುರುತಿಸುವುದು |

## ಚಿತ್ರ ಓದು

ಪಾಠಪುಸ್ತಕದ ಪುಟ ಸಂಖ್ಯೆ 41 ಮೊದಲಿನ ಚಿತ್ರ ನೋಡಿರಿ. ಕಪ್ಪೆ ಉಳಿದ ಗೆಳೆಯರೊಡನೆ ಏನೋ ಹೇಳುತ್ತಿದೆಯಲ್ಲಾ. ಏನು ಹೇಳುತ್ತಿರಬಹುದು? ಬೇಸಗೆ ಕಾಲ ಬಂತು. ಹೊಳೆಯ ನೀರು ಕಡಿಮೆ ಆಗುತ್ತಿದೆ. ಇನ್ನು ಇಲ್ಲಿದ್ದರೆ ನಾವೆಲ್ಲರೂ ಸಾಯಬಹುದು. ಆದಷ್ಟು ಬೇಗನೆ ಇಲ್ಲಿಂದ ಪಾರಾಗುವ ಎಂದು ಮುದಿ ಕಪ್ಪೆ ಹೇಳಿತು.

## ಚಿತ್ರ ಓದು

ಚಿತ್ರ ಪುಟ ಸಂಖ್ಯೆ 42 ನೋಡಿರಿ. ಈಗ ನದಿ ಹೇಗಿದೆ? F.R ಆಮೆ, ಕಪ್ಪೆ ಮತ್ತು ಏಡಿಗಳನ್ನು ನೋಡಿರಿ. ಅವುಗಳು ಹೇಗಿವೆ? ಬೇಸರದಿಂದಲೋ ಸಂತೋಷದಿಂದಲೋ?

## ಆಡುವಾ

ಸಂತೋಷ ಮತ್ತು ಬೇಸರದ ಇಮೋಜಿಗಳನ್ನು ಮಕ್ಕಳಿಗೆ ಹಂಚುವುದು. ಅಧ್ಯಾಪಕರು ಕೆಲವು ಸಂದರ್ಭಗಳನ್ನು ಹೇಳುವುದು. ಮಕ್ಕಳು ತನ್ನ ಇಮೋಜಿಯನ್ನು ಎತ್ತಿ ತೋರಿಸುವುದು.

ಉದಾ : ನಾನು ಐಸ್ ಕ್ರೀಂ ತಿಂದೆನು.

ಇಮೋಜಿ ಸಂತೋಷ

ನನಗೆ ಜ್ವರ ಬರುತ್ತಿದೆ.

ಇಮೋಜಿ ಬೇಸರ

ಮುಂದುವರಿಯುವುದು.

ತಪ್ಪಾಗಿ ಪ್ರದರ್ಶಿಸಿದವರು ಆಟದಿಂದ ಹೊರಗೆ ಹೋಗುವರು.

## ಆಖ್ಯಾನ

ಇಲ್ಲಿ ಜೀವಿಗಳಿಗೆ ಬೇಸರ ಆದದ್ದು ಯಾಕಾಗಿರಬಹುದು? F.R ಮುದಿಕಪ್ಪೆಯ ಮಾತನ್ನು ಒಪ್ಪಿದ ಮರಿ ಮೀನುಗಳು ಹೌದು ಹೌದು ಈಗಲೇ ಹೋಗೋಣ ಎಂದು ನದಿಯಲ್ಲಿ ಈಜುತ್ತಾ ಸಮೀಪದ ಮದನಕೆರೆಯನ್ನು ಸೇರಿಕೊಂಡವು. ಜೊತೆಗೆ ಏಡಿಗಳೂ ಆಮೆಗಳೂ ಹೊರಟವು. ಆದರೆ ಜಂಭದ ಗಪ್ಪಿ ಮೀನು ಈ ಹೊಳೆಯಲ್ಲಿ ನೀರು ಬತ್ತಿ ಹೋಗದು. ನಾನು ಇಲ್ಲಿಂದ ಎಲ್ಲಿಗೂ ಹೋಗುವುದಿಲ್ಲ ಎಂದು ಹೇಳಿತು. ಅದರ ಜೊತೆಗೆ ಇನ್ನೂ ಕೆಲವು ಮೀನುಗಳು ಅಲ್ಲೇ ಉಳಿದವು. ಆದರೆ ದಿನ ಕಳೆದಂತೆ ನೀರು ಕಡಿಮೆಯಾಗುತ್ತಲೇ ಇತ್ತು. ಹೆದರಿದ ಉಳಿದ ಮೀನುಗಳೂ ನಾವಿನ್ನು ಬದುಕಲಾರೆವು ಎಂದು ಕೆರೆಯತ್ತ ಈಜಿದವು.

**ಚಿತ್ರ ಓದು**

ಚಿತ್ರ ನೋಡಿರಿ.

ಈಗ ಹೊಳೆ ಹೇಗಿದೆ?

ಹೊಳೆಯ ನೀರು ಏನಾಯಿತು?

ಗಪ್ಪಿ ಮೀನಿಗೆ ಏನಾಯಿತು?

**ಆಡುವಾ**

ಪುನಃ ಇಮೋಜಿ ಆಟ ಆಡಿಸುವುದು. ಈಗ ಸಂತೋಷ , ಬೇಸರ ಮತ್ತು ಭಯದ ಇಮೋಜಿಗಳನ್ನು ಉಪಯೋಗಿಸಬೇಕು.

**ಆಖ್ಯಾನ**

ಹೊಳೆಯ ನೀರಿನ ಹರಿವು ನಿಂತಿತು.ಮೂಲೆಯಲ್ಲಿದ್ದ ಒಂದು ಹೊಂಡದಲ್ಲಿ ಮಾತ್ರ ಸ್ವಲ್ಪ ನೀರು ಉಳಿಯಿತು. ಗಪ್ಪಿ ಅದರಲ್ಲಿ ಸೇರಿಕೊಂಡಿತು. ಅದಕ್ಕೆ ಭಯವಾಯಿತು. ಮುದಿಕಪ್ಪೆಯ ಮಾತು ಕೇಳುತ್ತಿದ್ದರೆ ಹೀಗಾಗುತ್ತಿರಲಿಲ್ಲ. ಎಂದು ಅದಕ್ಕೆ ಅನಿಸತೊಡಗಿತು. ಗಪ್ಪಿ ಮೀನು ಜೋರಾಗಿ ಅಳತೊಡಗಿತು. ಆಗ ಅಲ್ಲಿಗೆ ಕಪ್ಪೆಯು ಬಂದು ಸಮಾಧಾನ ಹೇಳಿತು. ಕಪ್ಪೆ ಏನು ಹೇಳಿರಬಹುದು ? F.R “ಅಳಬೇಡ ಗಪ್ಪಿ ಅದೋ ಕಪ್ಪಾದ ಮೋಡಗಳಿವೆ ಮಳೆ ಬರಬಹುದು’ ಎಂದು ಹೇಳಿ ಹೋಯಿತು. ಗಪ್ಪಿ ಏನು ಮಾಡಿರಬಹುದು?

**ಚಿತ್ರ ಓದು**

ಪಾಠಪುಸ್ತಕ ಪುಟ ಸಂಖ್ಯೆ 44 ನ್ನು ನೋಡಿರಿ.

ಚಿತ್ರದಲ್ಲಿ ಏನು ಕಾಣಿಸುತ್ತಿದೆ?

ಗಪ್ಪಿ ಮಳೆರಾಯದಲ್ಲಿ ಏನು ಹೇಳುತ್ತಿರಬಹುದು ?

ಮಳೆರಾಯ ಏನು ಉತ್ತರ ಹೇಳಿರಬಹುದು?

TEXT ಗೆ ಪೂರಕ ಪ್ರಶ್ನೆಗಳನ್ನು ಕೇಳುವುದರ ಮೂಲಕ ಈ TEXTನ್ನು ಚಾರ್ಟಿನಲ್ಲಿ ಬರೆಯುವುದು. ಓದಿಸುವುದು. ನಂತರ ಮಕ್ಕಳು ಗಪ್ಪಿ ಮೀನು, ಮಳೆರಾಯ ಎಂಬ ಪದಗಳಿಗೆ ಚಾರ್ಟಿನಲ್ಲಿ ಉರುಟು ಹಾಕುವುದು. ಆಮೇಲೆ ಬೆರಳಿಟ್ಟುಕೊಂಡು ಪುಸ್ತಕವನ್ನು ಓದುವುದು. ಚಾರ್ಟಿನಲ್ಲಿ ಉರುಟು ಹಾಕಿದ ಪದಗಳ ಅಡಿಗೆ ಗೆರೆ ಎಳೆಯುವುದು.

ಈಗ ಗಪ್ಪಿಗೆ ಏನಾಯಿತು? ಇಮೋಜಿ ಪ್ರದರ್ಶಿಸವುದು.

## ಕಾಗದದ ಮೀನು ನಿರ್ಮಾಣ

QR CODE

ತಯಾರಿಸಿದ ಮೀನುಗಳಿಗೆ ಹೆಸರು ನೀಡಿ ತರಗತಿಯ ಭಿತ್ತಿ ಪತ್ರಿಕೆಯಲ್ಲಿ ಅಂಟಿಸುವುದು.

## ಆಖ್ಯಾನ

ಗಪ್ಪಿಯು ಪುನಃ ಅಳತೊಡಗಿತು. ಆಗ ಮುದಿ ಕಪ್ಪೆ ಬಂದು ತಾನೇ ಮಳೆರಾಯನನ್ನು ಕರೆಯಿತು.

ಚಿತ್ರಕ್ಕೆ ಗುರುತು ಹಾಕುವ

ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಲಿ.

## ಆಖ್ಯಾನ

ಕಪ್ಪೆಯು ಮಳೆರಾಯನನ್ನು ಕರೆಯುತ್ತಿದ್ದಂತೆ ಆಕಾಶ ಕಪ್ಪಾಯಿತು. ಗಾಳಿ ಬೀಸಿತು. ಗುಡುಗು ಗುಡುಗಿತು ಮಳೆ ಹನಿಯತೊಡಗಿತು. ಹನಿ ಮಳೆಯು ಜೋರಾಯಿತು. ಆಖ್ಯಾನವನ್ನು ಅಧ್ಯಾಪಕರು ಹಾವ ಭಾವಗಳೊಂದಿಗೆ ಬಹಳ ರಸವತ್ತಾಗಿ ಮಂಡಿಸಬೇಕು.

## ಹಾಡೋಣ

ಮಳೆ ಹೇಗೆ ಬಂತು ಗೊತ್ತೇ? ಅಧ್ಯಾಪಕರು ಚಾರ್ಟಿನಲ್ಲಿ ಬರೆದ ಹಾಡನ್ನು ಓದುವುದು. ನಂತರ ಒಂದೆರಡು ಬಾರಿ ಹಾಡುವುದು. ಮಕ್ಕಳಿಂದ ಹಾಡಿಸುವುದು. ಅಭಿನಯಿಸುತ್ತಾ ಹಾಡುವುದು.

ಮಳೆ ಎಂಬ ಪದಕ್ಕೆ ಉರುಟು ಹಾಕುವುದು. ನಂತರ ಳೆ ಎಂಬ ಅಕ್ಷರಕ್ಕೆ ಉರುಟು ಹಾಕಲು ಅಕ್ಷರವನ್ನು ಚಾರ್ಟಿನಲ್ಲಿ ಬರೆದು ಮಳೆಯ ಚಿತ್ರವನ್ನು ಅಧ್ಯಾಪಕರು ಮಕ್ಕಳಿಗೆ ಕೊಡುವುದು. ಅದನ್ನು ಸಚಿತ್ರಪುಸ್ತಕದಲ್ಲಿ ಅಂಟಿಸಲು ಸಹಾಯ ಮಾಡುವುದು. ಮಳೆ ಎಂದು ಬರೆಯಲಿ. ಸಾಧ್ಯವಾಗದ ಮಕ್ಕಳಿಗೆ ಬೆಂಬಲ ಪುಸ್ತಕದ ಸಹಾಯದಿಂದ ಬರೆಸುವುದು.

**ನೋಡುವ**

ಮಳೆಯ ವಿಡಿಯೋ ಪ್ರದರ್ಶನ. ಎಡೆಯಲ್ಲಿ ನಿಲ್ಲಿಸಿ .ಯಾವುದರ ಮೇಲೆ ಮಳೆ ಬೀಳುತ್ತಿದೆ? ಎಂಬ ಪ್ರಶ್ನೆಯನ್ನು ಕೇಳುವುದು.

**ಹಾಡುವ**

ಹುಯ್ಯೋ ಹುಯ್ಯೋ ಮಳೆರಾಯ

QR CODE

**ಚರ್ಚೆ**

ಮಳೆಗಾಲ ಮತ್ತು ಬೇಸಿಗೆ ಕಾಲಗಳ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸುವುದು. ಈ ಕಾಲಗಳಲ್ಲಿ ಪರಿಸರದಲ್ಲಿ ಏನೇನು ಬದಲಾವಣೆಗಳಾಗುತ್ತದೆ ಎಂಬುದರ ಕುರಿತು ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ. ಪೂರಕ ವಿಡಿಯೋ ಚಿತ್ರಗಳನ್ನು ICTಯ ಮೂಲಕ ಅಧ್ಯಾಪಕರು ಪ್ರದರ್ಶಿಸಬೇಕು. W.S 4.6

**ಚಿತ್ರ ಬಿಡಿಸುವ**

ಒಂದು A4ಕಾಗದವನ್ನು ಅಡ್ಡಕ್ಕೆ ಮಡಚಿ ಪ್ರತಿಯೊಬ್ಬ ಮಗುವಿಗೂ ಒಂದರಂತೆ ನೀಡುವುದು. ನಂತರ ಅದರ ಮೋಲ್ಭಾಗದಲ್ಲಿ ಮಳೆಗಾಲದ ದೃಶ್ಯಗಳನ್ನು ಚಿತ್ರಿಸಲು ಹೇಳುವುದು. ಬಣ್ಣ ಹಚ್ಚಲು ಕ್ರಯೋನ್ ಗಳನ್ನು ಒದಗಿಸಬೇಕು. ಮಕ್ಕಳು ವೃತ್ತಾಕಾರದಲ್ಲಿ ನಿಂತು ತಮ್ಮ ಚಿತ್ರಗಳನ್ನು ಪ್ರದರ್ಶಿಸಲಿ.

ನಂತರ ಇನ್ನುಳಿದ ಅರ್ಧಭಾಗದಲ್ಲಿ ಬೇಲಿಗೆಯಲ್ಲಿ ನಮ್ಮ ಪರಿಸರದಲ್ಲಿ ಕಂಡುಬರುವ ಬದಲಾವಣೆಗಳನ್ನು ಚಿತ್ರಿಸಲು ಸೂಚಿಸುವುದು.(ಮರ,ಹೊಳೆ ಇತ್ಯಾದಿಗಳು ಎರಡೂ ಚಿತ್ರಗಳಲ್ಲೂ ಇರುವಂತೆ ಬೆಂಬಲ ನೀಡಬೇಕು.)

ಚಿತ್ರಗಳನ್ನು ಭಿತ್ತಿಪತ್ರಿಕೆಯಲ್ಲಿ ಅಂಟಿಸಿ ಪ್ರದರ್ಶಿಸುವುದು.

W.S 4.2

ಪ್ರಶ್ನೆಯನ್ನು ಕೇಳಬೇಕು.

## ಬರೆಯುವ

ಜೋರಾಗಿ ಮಳೆ ಬಂತು. ಬಯಲಿಗೆ ಆಡಲು ಹೋಗಿದ್ದ ಜಗ್ಗು ಆನೆ ಮತ್ತು ನಂದಿನಿ ದನಗಳ ಮೇಲೆ ಮಳೆ ಬಂತು. ಅವುಗಳು ಓಡಿ ಹೋಗಿ ಮರದ ಅಡಿಯಲ್ಲಿ ನಿಂತವು. ಅವರು ಅಲ್ಲಿ ಇದ್ದ ಒಂದು ದೊಡ್ಡ ಕೊಡೆಯನ್ನು ಬಿಡಿಸಿ ಅದರ ಅಡಿಯಲ್ಲಿ ನಿಂತರು. ಕೊಡೆಯ ಮೇಲೆ ಯೂ ಮಳೆ ಬಂತು. ಬೇರೆ ಯಾವುದರ ಮೇಲೆ ಮಳೆ ಬಂದಿರಬಹುದು? F.R

ಎಲೆಯ ಮೇಲೆ ಮಳೆ

ಮನೆಯ ಮೇಲೆ ಮಳೆ

ಪಾಠಪುಸ್ತಕದ ಪುಟ ಸಂಖ್ಯೆ 49ರಲ್ಲಿ ಚಿತ್ರ ಮಾಡಿ ಬಣ್ಣ ಹಚ್ಚಿರಿ. ಎಲೆಯ ಮೇಲೆ ಮಳೆ ಬೀಳುತ್ತಿರುವ ಚಿತ್ರವನ್ನು ಕೊಡುವುದು. ಮಕ್ಕಳು ಸಚಿತ್ರ ಪುಸ್ತಕದಲ್ಲಿ ಅಂಟಿಸಿ ಎಲೆಯ ಮೇಲೆ ಮಳೆ ಎಂದು ಬರೆಯಲಿ.

## ಆಖ್ಯಾನ

ಮಳೆ ಧಾರಾಕಾರವಾಗಿ ಹರಿಯಿತು. ಹೊಳೆಯು ತುಂಬಿ ಹರಿಯಿತು.ಮಳೆಯ ನೀರು ಎಲ್ಲೆಲ್ಲಾ ತುಂಬಿರಬಹುದು? F.R

## ಬಯಲು ಪ್ರವಾಸ

ನೀರಿನ ಮೂಲಗಳ ಕಡೆಗೆ ಬಯಲು ಪ್ರವಾಸ ಕೈಗೊಳ್ಳುವುದು.ಸಾಕಷ್ಟು ಮುಂಜಾಗ್ರತೆಗಳನ್ನು ಕೈಗೊಳ್ಳುವುದು. ಕೆರೆ, ಬಾವಿ, ಸುರಂಗ, ತೋಡು,ನದಿ,ಸಮುದ್ರ.

ನೋಡಿದ ಜಲಮೂಲಗಳನ್ನು ತಮ್ಮ ಪುಸ್ತಕದಲ್ಲಿ ಚಿತ್ರಿಸಲಿ.

ತಮ್ಮ ಪರಿಸರದಲ್ಲಿ ಕಾಣಲು ಸಿಗದ ಜಲಮೂಲಗಳನ್ನು ICTಯ ಸಹಾಯದೊಂದಿಗೆ ಮಕ್ಕಳಿಗೆ ಪರಿಚಯಪಡಿಸುವುದು. ಮಕ್ಕಳ ಮನೆಯಲ್ಲಿ ಇರುವ ಜಲಮೂಲಗಳ ಬಗ್ಗೆ ಹೇಳಲು ಅವಕಾಶ ಒದಗಿಸುವುದು. ನೀರು ನಮಗೆ ಯಾಕೆ ಬೇಕು? ಬಾಯ್ದೆರೆಯಾಗಿ ಹೇಳಲಿ. ಅಭಿನಯಿಸಿ ತೋರಿಸಲಿ.

W.S 4.3, W.S 4.5

ನೀರಿನ ಮೂಲಗಳು

ಪಾಠಪುಸ್ತಕದ 50ನೆಯ ಪುಟದ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಲಿ.

### ಆಖ್ಯಾನ

ಹೊಳೆಯಲ್ಲಿ ನೀರು ತುಂಬಿದಾಗ ಜೀವಿಗಳಿಗೆಲ್ಲಾ ತುಂಬಾ ಸಂತೋಷವಾಯಿತು. ಅವುಗಳು ಮೊದಲಿನಂತೆ ನೀರಿನಲ್ಲಿ ಆಟವಾಡತೊಡಗಿದವು. ಆಗ ನೀರಿನಲ್ಲಿ ತುಂಬಾ ದೋಣಿಗಳು ತೇಲಿ ಬರುತ್ತಿರುವುದು ಕಪ್ಪೆಗೆ ಕಾಣಿಸಿತು. ಅಲ್ಲಿ ನೋಡು ಮಕ್ಕಳು ದೋಣಿ ಬಿಡುತ್ತಿದ್ದಾರೆ. ಎಂದು ಗಪ್ಪಿ ಹೇಳಿತು. ದೋಣಿ ಕಪ್ಪೆಯ ಬಳಿ ತಲುಪಿದಾಗ ಕಪ್ಪೆಯು ಅದರಲ್ಲಿ ಹತ್ತಿ ಕುಳಿತಿತು.

### ಚಿತ್ರ ಓದು

ಪಾಠಪುಸ್ತಕದ 52ನೆಯ ಪುಟ ನೋಡಿರಿ.

ಚಿತ್ರದಲ್ಲಿ ಏನಿದೆ?

ಎಷ್ಟು ದೋಣಿಗಳಿವೆ?

ಯಾವೆಲ್ಲಾ ಬಣ್ಣದ ದೋಣಿಗಳಿವೆ?

### ಚಿತ್ರ ಅಂಟಿಸುವ ಬರೆಯುವ

ಮಕ್ಕಳಿಗೆ ಬಣ್ಣದ ದೋಣಿಗಳ ಚಿತ್ರಗಳನ್ನು ಕೊಡುವುದು. ಅದನ್ನು ಸಚಿತ್ರ ಪುಸ್ತಕದಲ್ಲಿ ಅಂಟಿಸಲಿ. ದೋಣಿ ಎಂದು ಬರೆಯಲಿ. ಬರೆಯಲು ಸಾಧ್ಯವಾಗದ ಮಕ್ಕಳು ಪಾಠಪುಸ್ತಕದಲ್ಲಿ ದೋಣಿ ಎಂಬ ಪದಕ್ಕೆ ಉರುಟು ಹಾಕಲಿ.

W.S 4.10